ಸಂಪುಟ: 04 ಸಂಚಿಕೆ: 223 ಪುಟಗಳು: 08 ಶನಿವಾರ 26 ಅಕ್ಟೋಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಸದಾಕಾಲ ಕ್ರಿಯಾಶೀಲರಾಗಿರಿ. ನಿಮ್ಮ ಜವಾಬ್ದಾರಿಗಳನ್ನು ನೀವೇ ಹೊತ್ತುಕೊಳ್ಳಿ. ನಿಮ್ಮ ಕನಸುಗಳಿಗಾಗಿ ಕೆಲಸ ಮಾಡಿ. ಇಲ್ಲವಾದರೆ ನೀವು ನಿಮ್ಮ ಅದೃಷ್ಟವನ್ನು ಬೇರೆಯವರಿಗೆ ಶರಣಾಗಿಸುತ್ತೀರಿ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮೂರೂ ಪಕ್ಷಗಳಲ್ಲೂ ರಾಜಕೀಯ ಚಟುವಟಿಕೆ ಗರಿಗೆದರಿದೆ. ರಾಜ್ಯದಲ್ಲಿ ಉಪ ಚುನಾವಣೆ ಅಖಾಡ ರಂಗೇರಿದೆ. ನಾಮಪತ್ರ ಸಲ್ಲಿಕೆಗೆ ಕಡೆಯೇ ದಿನ ರಾಮನಗರ ಜಿಲ್ಲೆ ಚನ್ನಪಟ್ಟಣದಿಂದ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಎನ್ ಡಿಎ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಸಂಸದ ಬಿ. ರಾಘವೇಂದ್ರ ಹಾಗೂ ನಿಖಿಲ್ ಕುಮಾರಸ್ವಾಮಿ ಪತ್ನಿ ರೇವತಿ ಉಪಸ್ಥಿತರಿದ್ದರು.**

**● ಮೂರೂ ಕ್ಷೇತ್ರಗಳಲ್ಲಿ ಬಂಡಾಯ ಭೀತಿ ● ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ, ● ಬಂಗಾರು ಹನುಮಂತು NDA ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ**

# ಉಪ ಯುದ್ಧ ಅಖಾಡ ಸಿದ್ಧ

ರೋಡ್ ಶೋ ನಲ್ಲಿ ಪಾಲ್ಗೊಂಡು ಮಾತನಾಡಿದ ಬಿ.ವೈ. ವಿಜಯೇಂದ್ರ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣದಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿ. ಶ್ರೀರಾಮುಲು ಅವರನ್ನು ಸೋಲಿಸಲಾಗಿದೆ. ಈ ಬಾರಿಯ ಉಪ ಚುನಾವಣೆಯಲ್ಲಿ ಕಾಂಗ್ರೇಸ್ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ತಕ್ಕ ಪಾಠ ಕಲಿಸಬೇಕು ಎಂದು ಜನತೆಗೆ ಕರೆ ನೀಡಿದರು. ಸಂಡೂರಿನಲ್ಲಿ ಪಕ್ಷದ ಪ್ರಮುಖರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿನ ಕಾರ್ಯತಂತ್ರಗಳು ಹಾಗೂ ದಾಖಲೆಯ ಪ್ರಮಾಣದಲ್ಲಿ ಮತಗಳಿಕೆಯ ಮೂಲಕ ದೊಡ್ಡ ಪ್ರಮಾಣದ ಅಂತರಗಳಿಂದ ಗೆಲ್ಲಿಸಲು ವಿರಮಿಸದೇ ಶ್ರಮಿಸಬೇಕೆಂಬ ಸಂಕಲ್ಪ ಮಾಡಲಾಯಿತು. ಶಿಗ್ಗಾವಿ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ, ಬಸವರಾಜ ಬೊಮ್ಮಾಯಿರವರ ಪುತ್ರ ಭರತ್ ಬೊಮ್ಮಾಯಿ, ಕೈ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್, ತಮ್ಮ ಉಮೇದುವಾರಿಕೆ ಸಲ್ಲಿಸಿದರು.

**ಕಾಂಗ್ರೇಸ್ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ತಕ್ಕ ಪಾಠ ಕಲಿಸಬೇಕು**

ಚನ್ನಪಟ್ಟಣ ಕ್ಷೇತ್ರದಿಂದ ಮಾಜಿ ಪ್ರಧಾನಿ ದೇವೇಗೌಡರ ಮೊಮ್ಮಗ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿಯವರ ಪುತ್ರ ನಿಖಿಲ್ ಕುಮಾರಸ್ವಾಮಿ, ಶಿಗ್ಗಾಂವಿ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರ ಪುತ್ರ ಭರತ್ ಬೊಮ್ಮಾಯಿ, ಹಾಗೆಯೇ ಶಿಗ್ಗಾಂವಿಯಲ್ಲಿ ಕೈ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್, ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಬಂಗಾರು ಹನುಮಂತು ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಚನ್ನಪಟ್ಟಣದಲ್ಲಿ ನಾಮಪತ್ರ ಸಲ್ಲಿಕೆಗೂ ಮುನ್ನ ನಿಖಿಲ್ ಕುಮಾರಸ್ವಾಮಿಯವರು ಮಾಜಿ ಪ್ರಧಾನಿ ದೇವೇಗೌಡರ ಆಶೀರ್ವಾದ ಪಡೆದುಕೊಂಡು ಬೆಂಗಳೂರಿನ ಜೆ.ಪಿ.ನಗರಲ್ಲಿರುವ ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರ ದೇವಾಲಯಕ್ಕೆ ದೇವೇಗೌಡರು ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿಯವರ ಜತೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

**ನಾಮಪತ್ರ ಸಲ್ಲಿಕೆ ಭರಾಟೆ**

- ಉದಯವಾಹಿನಿ, ಬೆಂಗಳೂರು

ಇದಕ್ಕೂ ಮುನ್ನಾ ಕೆಂಗಲ್ ಅಂಜನೇಯಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ನಿಖಿಲ್ ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸುವ ಬೃಹತ್ ಶಕ್ತಿ ಪ್ರದರ್ಶನ ನಡೆಸಿದರು. ಪಟ್ಟಣದ ಶೇರು ಹೋಟೆಲ್ ವೃತ್ತದಿಂದ ಸಾತನೂರು ವೃತ್ತದ ಬಳಿ ಇರುವ ಚುನಾವಣಾ ಅಧಿಕಾರಿ ಕಚೇರಿ ಕಚೇರಿಯವರೆಗೂ ಸುಮಾರು ಅರ್ಧ ಕಿಲೋ ಮೀಟರ್ ದೂರ ನಡೆದ ರೋಡ್ ಶೋನಲ್ಲಿ ವಿಪಕ್ಷ ನಾಯಕ ಆರ್. ಅಶೋಕ್. ಸದಾನಂದಗೌಡ, ಅಶ್ವತ್ಥ ನಾರಾಯಣ ಮತ್ತಿತರ ನಾಯಕರು ಪಾಲ್ಗೊಂಡರು.

ಈ ವೇಳೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ನನಗೆ ಅನಿರೀಕ್ಷಿತವಾಗಿ ಟಿಕೆಟ್ ಸಿಕ್ಕಿದೆ. ಆದರೆ, ಗೆಲ್ಲುವ ವಿಶ್ವಾಸದಿಂದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ತಮ್ಮನ್ನು ಆಯ್ಕೆ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ದೇವೇಗೌಡ, ಕುಮಾರಸ್ವಾಮಿ ಅವರು ಕ್ಷೇತ್ರದ ಅಭಿವೃದ್ಧಿ ಮಾಡಿದ್ದು, ಅವರು ಮಾಡಿರುವ ಕೆಲಸಗಳು ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ತಿಳಿಸಿದರು. ಕುಮಾರಸ್ವಾಮಿ ಮಾತನಾಡಿ, ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಬಿಜೆಪಿ-ಜೆಡಿಎಸ್ ಗೆಲ್ಲುವ ಮೂಲಕ ಕಾಂಗ್ರೇಸ್ ರಾಜಕೀಯ ಪಿತೂರಿಗೆ ಅಂತ್ಯ ಹಾಡಲಾಗುವುದು ಎಂದರು.

ಬಿಜೆಪಿ-ಜೆಡಿಎಸ್ ಅವಧಿಯಲ್ಲಿ ಚನ್ನಪಟ್ಟಣದಲ್ಲಿ ಅಭಿವೃದ್ಧಿಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಬರೀ ಮಾತ ನಾಡಿರುವುದು ಹೊರತುಪಡಿಸಿದರೆ ಕ್ಷೇತ್ರದಲ್ಲಿ ಬೇರೆ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಸಿ. ಪಿ. ಯೋಗೇಶ್ವರ್ ಬಿಜೆಪಿ ತೊರೆದು ಕಾಂಗ್ರೇಸ್ ಸೇರ್ಪಡೆಯಾಗಿರುವುದರಿಂದ ಅವರ ವಿರುದ್ಧ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸುತ್ತಿದ್ದಾರೆ. ಮಂಡ್ಯ ಲೋಕಸಭೆ, ರಾಮನಗರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ನಿಖಿಲ್ ಕುಮಾರಸ್ವಾಮಿ ಅವರಿಗೆ ಇದು ಮೂರನೇ ಚುನಾವಣೆಯಾಗಿದೆ.

ಅತ್ತ ಸಂಡೂರಿನಲ್ಲಿ ಬಂಗಾರು ಹನುಮಂತು ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ ಸಲ್ಲಿಸಿದರು. ತಹಶೀಲ್ದಾರ್ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ, ಶ್ರೀರಾಮುಲು ಮತ್ತಿತರ ನಾಯಕರ ಸಮ್ಮುಖದಲ್ಲಿ ಬಂಗಾರು ಹನುಮಂತು ತಮ್ಮ ಉಮೇದುವಾರಿ ಸಲ್ಲಿಸಿದರು.

**ರಂಗೇರಿದ ಚನ್ನಪಟ್ಟಣ ಅಖಾಡ**

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಸವಣೂರು ತಾಲ್ಲೂಕಿನ ವೀರಭದ್ರಸ್ವಾಮಿ ದೇವಸ್ಥಾನ, ಗಾಯತ್ರಿ ತಪೋಭೂಮಿಗೆ ಭೇಟಿ ನೀಡಿ ಮಗನ ಗೆಲುವಿಗೆ ವಿಶೇಷ ಪೂಜೆ ಪ್ರಾರ್ಥನೆ ಮಾಡಿದರು. ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಎರಡೂ ಪಕ್ಷಗಳ ನಾಯಕರ ದಂಡೇ ನೆರೆದಿತ್ತು. ಶಿಗ್ಗಾಂವಿಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬಸವರಾಜ ಬೊಮ್ಮಾಯಿವರ ಪುತ್ರ ಭರತ್ ಬೊಮ್ಮಾಯಿ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಹಾಜರಿದ್ದು ಬಲ ತುಂಬಿದರು.

**ವಿಶೇಷ ಪೂಜೆ ಪ್ರಾರ್ಥನೆ**

**ಬಂಡಾಯದ ಭೀತಿ**

ಮೂರು ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆ ಮುಗಿದಿರುವ ಬೆನ್ನಲ್ಲೇ ಎಲ್ಲಾ ಪಕ್ಷಗಳಲ್ಲೂ ಬಂಡಾಯ ಬಾವುಟ ಹಾರಿದೆ. ಟಿಕೆಟ್ ಸಿಗದೆ ಅಸಮಧಾನಗೊಂಡಿರುವವರು ಬಂಡಾಯದ ಕಹಳೆ ಊದಿದ್ದಾರೆ. ಶಿಗ್ಗಾವಿಯಲ್ಲಿ ಬಸವರಾಜ್ ಬೊಮಾಯಿ ಅವರ ಆಪ್ತ ಹಾಗೂ ಟಿಕೆಟ್ ಆಕಾಂಕ್ಷಿ ಶ್ರೀಕಾಂತ್ ದುಂಡಿಗೌಡರ್ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಿಗ್ಗಾಂವಿ ಕ್ಷೇತ್ರದಲ್ಲಿ ಇಂತಹ ಯಾವುದೇ ಬೆಳವಣಿಗೆಯಿಲ್ಲ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ, ಮುಂಬರುವ ಉಪಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಲಾಗುವುದು ಎಂದಿದ್ದಾರೆ. ತಮ್ಮ ರಾಜಕೀಯ ಗುರು ಬಸವರಾಜ ಬೊಮಾಯಿ ಅವರು ನನಗೆ ಅನ್ಯಾಯ ಮಾಡಿದರು. ಟಿಕೆಟ್ ಕೊಡಿಸುವುದಾಗಿ ಹೇಳುತ್ತ, ತಮ್ಮ ಮಗನಿಗೆ ಟಿಕೆಟ್ ಕೊಡಿಸಿದರು. ನನಗೆ ಹಾಗೂ ಕಾರ್ಯಕರ್ತರಿಗೆ ನೋವಾಗಿದೆ ಎಂದು ಹೇಳಿದ್ದಾರೆ. ನಮ ಮುಂದಿನ ನಡೆ ಬಗ್ಗೆ ಚರ್ಚಿಸಲು ಸದ್ಯದಲ್ಲೇ ಹಿರಿಯರು ಮತ್ತು ಹಿತೈಷಿಗಳ ಸಭೆ ಕರೆದಿರುವೆ. ಅವರ ಅಭಿಪ್ರಾಯ ಪಡೆದು ನನ್ನ ನಿರ್ಧಾರ ಪ್ರಕಟಿಸುವೆ ಎಂದು ಹೇಳಿರುವುದು ಬಿಜೆಪಿ ಅಭ್ಯರ್ಥಿಗೆ ನಿದ್ದೆಗೆಡುವಂತೆ ಮಾಡಿದೆ.ಇನ್ನೊಂದೆಡೆ ಕಾಂಗ್ರೇಸ್‌ನಲ್ಲು ಪರಿಸ್ಥಿತಿ ಭಿನ್ನವಾಗಿಲ್ಲ. ಟಿಕೆಟ್ ಆಕಾಂಕ್ಷಿಯಾಗಿದ್ದ ಅಜಂಪಿರ್ ಖಾದ್ರಿ ಬಂಡಾಯದ ಕಹಳೆ ಊದಿದ್ದಾರೆ. ಅವರನ್ನು ಮನವೊಲಿಸುವ ಪ್ರಯತ್ನ ಮುಂದುವರೆದಿದೆ.

1 ಶುಕ್ರವಾರ ಚನ್ನಪಟ್ಟಣದಲ್ಲಿ ದೋಸ್ತಿ ನಾಯಕರ ಶಕ್ತಿ ಪ್ರದರ್ಶನದೊಂದಿಗೆ ನಾಮಪತ್ರ ಸಲ್ಲಿಕೆ

2 ವಿರೋಧ ಪಕ್ಷದ ನಾಯಕ ಆರ್ ಅಶೋಕ್, ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಸಿಎಂ ಡಿವಿ ಸದಾನಂದ ಗೌಡ ,ನಿಖಿಲ್ ಪತ್ನಿ ಉಪಸ್ಥಿತರಿದ್ದರು

3 ಸಂಡೂರು ಉಪಚುನಾವಣೆ: ಬಂಗಾರು ಹನುಮಂತು ನಾಮಪತ್ರ ಸಲ್ಲಿಕೆ

4 ಶಿಗ್ಗಾಂವಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ನಾಮಪತ್ರ ಸಲ್ಲಿಕೆ; ಬೃಹತ್ ರೋಡ್ ಶೋ ಮೂಲಕ ಶಕ್ತಿ ಪ್ರದರ್ಶನ

## ಕಾಂಗ್ರೇಸ್ ಪಕ್ಷದಲ್ಲಿ ಯಾವುದೇ ಬಂಡಾಯವಿಲ್ಲ

- ಉದಯವಾಹಿನಿ, ಬೆಂಗಳೂರು

ಶಿಗ್ಗಾಂವಿ ಉಪಚುನಾವಣೆ ಸಂಬಂಧ ಕಾಂಗ್ರೇಸ್ ಪಕ್ಷದಲ್ಲಿ ಯಾವುದೇ ಬಂಡಾಯವಿಲ್ಲ, ಸೈಯದ್ ಅಜ್ಜಂ ಪೀರ್ ಖಾದ್ರಿ ಅವರು ನಾಮಪತ್ರ ಹಿಂಪಡೆಯಲಿದ್ದು, ಎಲ್ಲಾರೂ ಒಟ್ಟಾಗಿ ಪಕ್ಷದ ಪರವಾಗಿ ಚುನಾವಣೆ ಮಾಡುತ್ತಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿ ಬಳಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.ಶಿಗ್ಗಾಂವಿಯಲ್ಲಿ ಖಾದ್ರಿ ಅವರು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಬಗ್ಗೆ ಕೇಳಿದಾಗ, ನಾನು ಖಾದ್ರಿ ಅವರು ಹಾಗೂ ಅವರ ಕಾರ್ಯಕರ್ತರ ಜತೆ ಮಾತನಾಡಿದ್ದೇನೆ. ಈ ವಿಚಾರವಾಗಿ ಸಚಿವರಾದ ಜಮೀರ್ ಅಹ್ಮದ್, ರಹೀಂ ಖಾನ್, ರೆಹಮಾನ್ ಖಾನ್ ಸೇರಿದಂತೆ ಆ ಜಿಲ್ಲೆಯ ನಾಯಕರ ಜತೆ ಚರ್ಚೆ ಮಾಡಿದ್ದು, ನಾಮಪತ್ರ ಹಿಂಪಡೆದು ಒಟ್ಟಾಗಿ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

## ಕರ್ನಾಟಕವನ್ನು ರಾಜ್ಯ ಸರ್ಕಾರ 'ಪಾಕಿಸ್ತಾನ' ಮಾಡಲು ಹೊರಟಿದೆ

- ಉದಯವಾಹಿನಿ, ಬೆಂಗಳೂರು

ಕರ್ನಾಟಕವನ್ನು ರಾಜ್ಯ ಸರ್ಕಾರ ಪಾಕಿಸ್ತಾನ ಮಾಡಲು ಹೊರಟಿದೆ. ವಿಜಯಪುರದ ಒಂದು ಜಿಲ್ಲೆಯ 15 ಸಾವಿರ ಎಕರೆ ರೈತರ ಜಮೀನನ್ನು ವಕ್ಫ್ ಬೋರ್ಡ್ ನನ್ನದು ಎಂದು ಹೇಳಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡಿದೆ. ಸಚಿವ ಜಮೀರ್ ಅಹ್ಮದ್ ಅವರು ಅಧಿಕಾರಿಗಳ ಮೇಲೆ ಒತ್ತಡ ಹೇರಿ ರೈತರ ಜಮೀನನ್ನು ವಕ್ಫ್ ಬೋರ್ಡ್ ಬರೆಯಿಸಲು ಹೊರಟಿದ್ದಾರೆ ಎಂಬುದಾಗಿ ಸಂಸದ ತೇಜಸ್ವಿ ಸೂರ್ಯ ಅವರು ವಾಗ್ದಾಳಿ ನಡೆಸಿದ್ದಾರೆ. ಬೆಂಗಳೂರಿನ ಜಯನಗರದ ಸಂಸದರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದಂತ ಅವರು, ವಿಜಯಪುರ ಜಿಲ್ಲೆ ತ್ರಿಕೋಟ ತಾಲ್ಲೂಕಿನ ಹೊನ್ನವಾಡ ಗ್ರಾಮದಲ್ಲಿ 11,500 ಎಕರೆ ಪ್ರದೇಶದ ರೈತರ ಜಮೀನನ್ನು ಸರ್ಕಾರ ರಾತ್ರೋ ರಾತ್ರಿ ವಕ್ಫ್ ಬೋರ್ಡ್ ಗೆ ನೀಡಲು ಹೊರಟಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಕ್ಫ್ ಬೋರ್ಡ್ ಕಾನೂನಿಗೆ ತಿದ್ದುಪಡಿಯನ್ನು ತರಲು ಹೊರಟಿರುವ ಕಾರಣಕ್ಕೆ ಸಚಿವ ಜಮೀರ್ ಅವರು ಈ ಕಾರ್ಯಕ್ಕೆ ಮುಂದಾಗಿದ್ದಾರೆ ಎಂಬುದಾಗಿ ಗುಡುಗಿದರು. ಮುಸ್ಲಿಂರು ಕಾಂಗ್ರೇಸ್ ಗೆ ಮತ ಹಾಕುತ್ತಾರೆ ಎಂಬ ಕಾರಣದಿಂದ ಹಿಂದೂಗಳ ಜಮೀನನ್ನು ಮುಸ್ಲಿಮರಿಗೆ ಹೊರಟಿದೆ. ವಿಜಯಪುರ ಜಿಲ್ಲೆಯಲ್ಲಿ 15 ಸಾವಿರ ಎಕರೆ ಜಮೀನನ್ನು ವಕ್ಫ್ ಬೋರ್ಡ್ ನೀಡುಲು ಹೊರಟಿರುವ ಮರ್ಮ ಏನು? ಎಂದು ಪ್ರಶ್ನಿಸಿದರು. ಅಲ್ಲದೇ ಇದರ ವಿರುದ್ಧ ಬಿಜೆಪಿ ಹೋರಾಟ ಮಾಡಲಾಗುತ್ತದೆ. ಕಾನೂನಾತ್ಮಕ ಹೋರಾಟ ರೂಪಿಸಲಾಗುವುದು. ಯಾವುದೇ ರೈತರು ವಕ್ಫ್ ಬೋರ್ಡ್ ನಿಂದ ಅಸ್ತಿ ಕಳೆದು ಕೊಂಡರೆ ನನ್ನ ಕಚೇರಿ ಸಂಪರ್ಕಿಸಿ ಎಂಬುದಾಗಿ ನಾಡಿನ ರೈತರಲ್ಲಿ ಸಂಸದ ತೇಜಸ್ವಿ ಸೂರ್ಯ ಮನವಿ ಮಾಡಿದರು.

## ಪುತ್ರನ ಕಣಕ್ಕಿಳಿಸಲು ಕುಮಾರಸ್ವಾಮಿ ಚದುರಂಗದಾಟ; ಡಿ.ಕೆ. ಸುರೇಶ್

- ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಮ್ಮ ಪುತ್ರ ನಿಖಿಲ್ ಅವರನ್ನು ಚನ್ನಪಟ್ಟಣ ಉಪ ಚುನಾವಣೆಯ ಕಣಕ್ಕೆ ಇಳಿಸಲು 'ಚದುರಂಗದಾಟ' ಸೃಷ್ಟಿಸಿದರು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಆರೋಪಿಸಿದರು. ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಕುಮಾರಸ್ವಾಮಿ 40 ವರ್ಷಗಳಿಂದ ರಾಜಕೀಯ ತಂತ್ರಗಾರಿಕೆ ಮಾಡಿಕೊಂಡು ಬಂದಿದ್ದಾರೆ. ಲೋಕಸಭೆಗೆ ಆಯ್ಕೆಯಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ದಿನವೇ ನಿಖಿಲ್ ಸ್ಪರ್ಧೆ ಖಚಿತವಾಗಿತ್ತು. ಅವರೇ ಮುಂದಿನ ಅಭ್ಯರ್ಥಿ ಎನ್ನುವುದು ಇಡೀ ಚನ್ನಪಟ್ಟಣಕ್ಕೆ ಗೊತ್ತಿತ್ತು. ಈಗ ನಿಖಿಲ್‌ಗೆ ಟಿಕೆಟ್ ಕೊಡುವ ಅನಿವಾರ್ಯತೆಯನ್ನು ಕಾಂಗ್ರೇಸ್ ಸೃಷ್ಟಿಸಿತು ಎಂದು ನಾಟಕ ಮಾಡುತ್ತಿದ್ದಾರೆ' ಎಂದು ಟೀಕಿಸಿದರು. 'ಜೆಡಿಎಸ್‌ಗೆ ಕುಮಾರಸ್ವಾಮಿ ಅವರೇ ಅಧಿನಾಯಕ. ಎಲ್ಲಾವನ್ನೂ ಅವರೇ ತೀರ್ಮಾನಿಸುತ್ತಾರೆ. ಬಲವಂತವಾಗಿ ನಿಖಿಲ್ ಅವರನ್ನು ಕಣಕ್ಕೆ ಇಳಿಸುತ್ತಿಲ್ಲ. ಅದೆಲ್ಲ ಪೂರ್ವನಿಗದಿತ. ನಾಮಪತ್ರ ಸಲ್ಲಿಸಿದ ನಂತರ ಇನ್ನಷ್ಟು ನಾಟಕಗಳು ಹೊರಬರುತ್ತವೆ' ಎಂದರು.

## ಡ್ರೋನ್ ಮೂಲಕ ನಿರ್ಮಾಣ ಹಂತದ ಕಟ್ಟಡಗಳ ಸಮೀಕ್ಷೆ

- ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಡ್ರೋನ್ ಮೂಲಕ ನಿರ್ಮಾಣ ಹಂತದ ಕಟ್ಟಡಗಳನ್ನು ಸಮೀಕ್ಷೆ ಮಾಡಲಾಗುತ್ತದೆ. ಒಂದು ವೇಳೆ ನಿಯಮ ಮೀರಿ ಕಟ್ಟಡ ಕಟ್ಟುತ್ತಿರುವುದು ಗಮನಕ್ಕೆ ಬಂದ್ರೇ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದಾಗಿ ಡಿಸಿಎಂ ಡಿ.ಕೆ ಶಿವಕುಮಾರ್ ಎಚ್ಚರಿಸಿದ್ದಾರೆ. ಬೆಂಗಳೂರು ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಬಗ್ಗೆ ಖಾಸಗಿ ಹಾಗೂ ಬಿಬಿಎಂಪಿಯಿಂದ ಸಮೀಕ್ಷೆ ನಡೆಸಲಾಗುವುದು. ಕಾನೂನುಬಾಹಿರ ನಿರ್ಮಾಣಗಳನ್ನು ಪತ್ತೆ ಹಚ್ಚಿ, ಪ್ರತಿ ಕಟ್ಟಡದ ಚಿತ್ರ ಹಾಗೂ ವಿಡಿಯೋಗಳನ್ನು ಸಂಗ್ರಹಿಸಲಾಗುವುದು. ಜಂಟಿ ಆಯುಕ್ತರ ನೇತೃತ್ವದಲ್ಲಿ ಡ್ರೋನ್ ಕ್ಯಾಮೆರಾಗಳಿಂದ ಮೇಲ್ವಿಚಾರಣೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಬಗ್ಗೆ ಸೋಮವಾರದಿಂದ ಸಮೀಕ್ಷೆ ನಡೆಸಲಾಗುವುದು. ಖಾಸಗಿ ಹಾಗೂ ಪಾಲಿಕೆಯಿಂದ ಈ ಸಮೀಕ್ಷೆ ನಡೆಸಲಾಗುವುದು ಎಂದರು.

## ರಾಜ್ಯಕ್ಕೆ ಪ್ರತ್ಯೇಕ ಧ್ವಜಕ್ಕಾಗಿ ಸಲ್ಲಿಸಿದ್ದ ಪಿಐಎಲ್ ವಜಾ

- ಉದಯವಾಹಿನಿ, ಬೆಂಗಳೂರು

ಈಗಾಗಲೇ ಕರ್ನಾಟಕ ರಾಜ್ಯಕ್ಕೆ ಹಳದಿ ಮತ್ತು ಕೆಂಪು ಮಿಶ್ರಿತ ನಾಡ ಧ್ವಜ ಹೊಂದಲಾಗಿದೆ. ಹೀಗಿದ್ದರೂ ಕೂಡ ರಾಜ್

**ಸಿದ್ಧಸೂಕ್ತಿ**

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಶ್ರೇಷ್ಠ - ಕನಿಷ್ಠ ವಿಚಾರ

ಮನುಸ್ಮೃತಿಗೆ ಸಂಬಂಧಿಸಿದ ಈ ಹಿಂದಿನ ಸೂಕ್ತಿಗಳಲ್ಲಿ ಶ್ರೇಷ್ಠತೆಯ ಅಂಶವನ್ನು ಗಮನಿಸಿದ್ದೇವೆ. ಅದರಂತೆ ಜೀವರಾಶಿಗಳಲ್ಲಿ ಮಾನವ ಶ್ರೇಷ್ಠ. ನಿಜ, ಇದು ನಮ್ಮ ದೃಷ್ಟಿಯಲ್ಲಿ. ಬುದ್ಧಿವಂತನೇ ಬಲವಂತ. ಆದ್ದರಿಂದ ಮಾನವ ಶ್ರೇಷ್ಠ. ಮಾನವರಲ್ಲಿ ಪುರುಷ ಶ್ರೇಷ್ಠ. ಇದನ್ನು ಒಪ್ಪಲಾಗದು. ಇಲ್ಲಿಯೇ ಹೇಳಿದಂತೆ ಬ್ರಹ್ಮನ ಒಂದರ್ಧ ಪುರುಷ ಇನ್ನೊಂದರ್ಧ ಸ್ತ್ರೀ. ಇಬ್ಬರೂ ಒಂದು ನಾಣ್ಯದ ಎರಡು ಮುಖಗಳು, ಚಕ್ಕಡಿಯ ಎರಡು ಚಕ್ರಗಳು. ಪರಸ್ಪರರಿಲ್ಲದಿದ್ದರೆ ಜೀವನ ಅಪೂರ್ಣ ಅತೃಪ್ತ. ದೈಹಿಕವಾಗಿ ಪುರುಷ ಪ್ರಬಲನಾಗಿದ್ದರೆ ಸಹನೆ ಕರುಣೆ ಪ್ರೀತಿ ತ್ಯಾಗ ಸಂಸ್ಕೃತಿ ಇಚ್ಛಾಶಕ್ತಿಗಳಲ್ಲಿ ಸ್ತ್ರೀ ಪ್ರಬಲಳು. ದುಡಿಮೆಗೆ ಸಾಮಾಜಿಕ ಸಂರಕ್ಷಣೆಗೆ ಗಟ್ಟಿ ನಿರ್ಧಾರಕ್ಕೆ ಪುರುಷ ಮುಖ್ಯ ಎನಬಹುದೇ ಹೊರತು ಪುರುಷ ಶ್ರೇಷ್ಠ ಸ್ತ್ರೀ ಕನಿಷ್ಠ ಎನ್ನಲಾಗದು. ದುರ್ಗೆಯ ಉದಾಹರಣೆ ಒಂದೇ ಸಾಕು. ಇನ್ನು ಮನುಷ್ಯರಲ್ಲಿ ಬ್ರಾಹ್ಮಣ ಶ್ರೇಷ್ಠ, ಬ್ರಹ್ಮನ ಮುಖದಿಂದ ಹುಟ್ಟಿದ್ದರಿಂದ ಕ್ಷತ್ರಿಯಾದಿಗಳಿಗಿಂತ ಮೊದಲು ಹುಟ್ಟಿದ್ದರಿಂದ ಎಂಬುದನ್ನೂ ಒಪ್ಪಲಾಗದು. ಹುಟ್ಟಿನಿಂದ ಎಲ್ಲರೂ ಶೂದ್ರರು ಎಂದಾಗ ಮೊದಲು ಬ್ರಾಹ್ಮಣರು ಎಂಬುದು ಹೇಗೆ? ಒಬ್ಬ ಮಾನವ ಹೇಗೆ ಹುಟ್ಟುತ್ತಾನೆಯೋ ಎಲ್ಲ ಮಾನವರೂ ಹಾಗೇ ಹುಟ್ಟಬೇಕು! ಒಬ್ಬ ಮುಖದಿಂದ ಮತ್ತೊಬ್ಬ ಕಾಲಿನಿಂದ ಹುಟ್ಟುವನೆಂಬುದು ಅಸಂಭವ.

## ಶಾಲೆಗಳಲ್ಲಿ ಕನ್ನಡ ರಾಜ್ಯೋತ್ಸವದಂದು ಧ್ವಜಾರೋಹಣ ಕಡ್ಡಾಯ

• ಉದಯವಾಹಿನಿ ಬೆಂಗಳೂರು

ನವೆಂಬರ್.1ರಂದು ಕನ್ನಡ ರಾಜ್ಯೋತ್ಸವದಂದು ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸೂಚಿಸಿರುವಂತೆ, ಕರ್ನಾಟಕ ರಾಜ್ಯ ಉದಯವಾಗಿ 70 ವರ್ಷಗಳು ಸಂದಿರುವ ಈ ಶುಭ ಸಂದರ್ಭದಲ್ಲಿ ಎಲ್ಲಾ ಶಾಲೆಗಳಲ್ಲಿ ನವಂಬರ್-1 ರಂದು ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವನ್ನು ಆಚರಿಸುವುದು ಮತ್ತು ಯುವ ಪೀಳಿಗೆಗೆ ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಕಲೆ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ ಎಂದಿದ್ದಾರೆ.ಈ ಹಿನ್ನಲೆಯಲ್ಲಿ ಎಲ್ಲಾ ಸರ್ಕಾರಿ/ ಅನುದಾನಿತ/ಅನುದಾನ ರಹಿತ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಧ್ವಜಸಂಹಿತೆಯನ್ವಯ ಧ್ವಜಾರೋಹಣ ಮಾಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ 69ನೇ ಕನ್ನಡ ರಾಜ್ಯೋತ್ಸವವನ್ನು ಯಶಸ್ವಿಯಾಗಿ ಆಚರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

## 57ನೇ ವರ್ಧಂತ್ಯುತ್ಸವದ ಸಮಾರಂಭ

• ಉದಯವಾಹಿನಿ ಬೆಂಗಳೂರು

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪರಮ ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರ ಪಟ್ಟಾಭಿಷೇಕದ 57 ನೇ ವರ್ಧಂತ್ಯುತ್ಸವದ ಸಮಾರಂಭದ ಅಧ್ಯಕ್ಷತೆ ವಹಿಸಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಸಂಸದರಾದ ಡಾ. ಸಿ ಎನ್ ಮಂಜುನಾಥ್ ರವರು ಭಾಗಿಯಾದರು. ಈ ಸಂದರ್ಭದಲ್ಲಿ ಪೂಜ್ಯ ಖಾವಂದರರ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸುವ ಭಾಗ್ಯ ಇವರದಾಗಿತ್ತು,

ಉದಯವಾಹಿನಿ ಚಿತ್ರ

ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಗಳಿಂದ ಹಿಡಿದು ಕಾರ್ಮಿಕರವರೆಗೆ ಯಾವುದೇ ವ್ಯಾಪಾರೀಕರಣ ವಿಲ್ಲದೇ ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸುವ ಪರಿ ನಿಜಕ್ಕೂ ಪ್ರೇರಣೀಯ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಸಮಾಜ ಸುಧಾರಣೆಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಪೂಜ್ಯರಿಗೆ ಶ್ರೀ ಅಣ್ಣಪ್ಪ ಸ್ವಾಮಿ ಇನ್ನಷ್ಟು ಶಕ್ತಿ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

## ಉಪಚುನಾವಣೆ ಬಳಿಕ ಜಾತಿ ಗಣತಿ ಮಂಡನೆ: ಸಿದ್ದರಾಮಯ್ಯ ಘೋಷಣೆ

• ಉದಯವಾಹಿನಿ ಬೆಂಗಳೂರು

ರಾಜ್ಯದಲ್ಲಿ ಉಪ ಚುನಾವಣೆ ನೀತಿ ಸಂಹಿತೆ ಮುಗಿದ ಬಳಿಕ ಜಾತಿ ಗಣತಿ ಮಂಡಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟದ ಪ್ರಧಾನ ಸಂಚಾಲಕರಾದ ಕೆ.ಎಂ. ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ನೂರಕ್ಕೂ ಅಧಿಕ ಮಂದಿ ಪದಾಧಿಕಾರಿಗಳು ಮತ್ತು ನಾನಾ ಸಮುದಾಯಗಳ ಮುಖಂಡರು ಸಿಎಂ ಸಿದ್ದರಾಮಯ್ಯರನ್ನು ಭೇಟಿಯಾಗಿ, ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಜಾರಿಗೊಳಿಸುವಂತೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಸದ್ಯ ಉಪಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದು, ಚುನಾವಣೆಯ ಬಳಿಕ ಸಚಿವ ಸಂಪುಟ ಸಭೆಯಲ್ಲಿ ವರದಿಯ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಟ್ರಾಫಿಕ್ ಪೊಲೀಸರಿಗೆ ಆವಾಜ್ ಹಾಕಿ ಮಹಿಳೆ ಕಿರಿಕ್ : ಕಾಲಿನಿಂದ ಒದ್ದು ರಂಪಾಟ!

• ಉದಯವಾಹಿನಿ ಬೆಂಗಳೂರು

ಬೆಂಗಳೂರಿನಲ್ಲಿ ಸಂಚಾರಿ ಪೊಲೀಸರಿಗೆ ಆವಾಜ್ ಹಾಕಿ ಪೊಲೀಸರಿಗೆ ಕಾಲಿನಿಂದ ಮಹಿಳೆಯೊಬ್ಬರು ಒದ್ದು ರಂಪಾಟ ಮಾಡಿರುವ ಘಟನೆ ನಡೆದಿದೆ.ಇಂದಿರಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಸಂಚಾರಿ ಪೊಲೀಸರಿಗೆ ಮಹಿಳೆ ಆವಾಜ್ ಹಾಕಿ ಕಿರಿಕ್ ಮಾಡಿದ್ದಾಳೆ.ಬೇರೊಬ್ಬ ವಾಹನ ಸವಾರನ ಜೊತೆಗೆ ಕಿರಿಕ್ ತೆಗೆದಿದ್ದ ಸೋನು ಎಂಬ ಮಹಿಳೆಯನ್ನು ವಿಚಾರಿಸಿದ ವೇಳೆ ಪೊಲೀಸರ ಮೇಲೆಯೇ ಹಲ್ಲೆಗೆ ಯತ್ನಿಸಿದ್ದಾಳೆ ಬೆಂಗಳೂರಿನ ಸಂಚಾರಿ ಪೊಲೀಸರ ಹಲ್ಲೆಗೆ ಯತ್ನಿಸಿದ ಮಹಿಳೆ, ಟ್ರಾಫಿಕ್ ಪೊಲೀಸ್ ಕಾಲಿಗೆ ಒದ್ದು, ಕಾಲರ್ ಹಿಡಿಯಲು ಮುಂದಾಗಿದ್ದಾಳೆ. ಇಂದಿರಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಸರ್ಕಾರದಿಂದ ಗಾಳಿಪಟ ಹಾರಿಸಲು ಮಾರ್ಗಸೂಚಿ ಪ್ರಕಟ

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರವು ಗಾಳಿಪಟ ಹರಿಸುವ ಕುರಿತಂತೆ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಇನ್ಮುಂದೆ ಗಾಳಿಪಟ ಹಾರಿಸಲು ಮಾಂಜಾ ದಾರ ಬಳಸುವಂತಿಲ್ಲ ಎಂದು ಸೂಚನೆ ನೀಡಿದೆ. ಗಾಳಿಪಟ ಹಾರಿಸುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮಾರ್ಗಸೂಚಿಯೊಂದನ್ನು ಹೊರಡಿಸಿದ್ದು, ಗಾಳಿಪಟಗಳಿಗೆ ಹತ್ತಿಯಿಂದ ಮಾಡಿದ ದಾರಗಳನ್ನು ಮಾತ್ರ ಬಳಸುವಂತೆ ಸೂಚಿಸಲಾಗಿದೆ. ಯಾವುದೇ ವ್ಯಕ್ತಿ, ಅಂಗಡಿಗಳು, ಸಗಟು ಮತ್ತು ಚಿಲ್ಲರೆ ಮಾರಾಟಗಾರರು, ನೈಲಾನ್ ಮತ್ತು ಗಾಜು ಮತ್ತಿತರ ಅಪಾಯಕಾರಿ ವಸ್ತುಗಳನ್ನು ಬಳಸಿ ಚೀನಿ ಮಾಂಜಾ, ಚೀನಿ ದಾರಗಳನ್ನು ತಯಾರು ಮಾಡುವುದು, ದಾಸ್ತಾನು ಮಾಡುವುದು ಹಾಗೂ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

# ರಾಜಕಾಲುವೆಯ ಅಕ್ಕಪಕ್ಕ 50 ಅಡಿ ಅಂತರದಲ್ಲಿ ಕಟ್ಟಡ ನಿರ್ಮಾಣ

## ಬಿಬಿಎಂಪಿ ಮತ್ತಿತರ ಅಧಿಕಾರಿಗಳ ಜತೆ ತುರ್ತುಸಭೆ, ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ಸೂಚನೆ

• ಉದಯವಾಹಿನಿ ಬೆಂಗಳೂರು

ಕೆರೆಗಳ ನಡುವೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ಅಕ್ಕಪಕ್ಕ 50 ಅಡಿ ಅಂತರದಲ್ಲಿ ಕಟ್ಟಡ ನಿರ್ಮಾಣ ನಿಷೇಧಿಸುವುದು, ಅಪಾಯಕಾರಿ, ಅನಧಿಕೃತ ಕಟ್ಟಡಗಳ ತೆರವು ಮಾಡಲು ಕಾನೂನಿಗೆ ತಿದ್ದುಪಡಿ ತರಲಾಗುವುದು ಎಂದು ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಅತಿವೃಷ್ಟಿ ವಿಪತ್ತು ನಿರ್ವಹಣೆ ಮತ್ತಿತರ ವಿಷಯಗಳ ಕುರಿತು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಮತ್ತಿತರ ಅಧಿಕಾರಿಗಳ ಜತೆ ತುರ್ತುಸಭೆ ನಡೆಸಿದರು.

ಬೆಂಗಳೂರು ನಗರದಲ್ಲಿ ಅತಿವೃಷ್ಟಿ ಸಮಸ್ಯೆ ನಿವಾರಣೆಗಾಗಿ ಹಲವು ಪ್ರಮುಖ ತೀರ್ಮಾನ ಕೈಗೊಂಡಿದ್ದು, ಅಧಿಕಾರಿಗಳಿಗೆ ಕೆಲವು ನಿರ್ದೇಶನ ನೀಡಿದ್ದೇನೆ. ಎಲ್ಲೆಲ್ಲಿ ಮಳೆನೀರು ವಸತಿ ಪ್ರದೇಶಗಳಿಗೆ ನುಗ್ಗಿ ಸಮಸ್ಯೆ ಎದುರಾಗುತ್ತಿದೆಯೋ ಅಲ್ಲಿ ಪರಿಹಾರಕ್ಕೆ ಯೋಜನೆ ರೂಪಿಸಿ, ಅದಕ್ಕೆ ಅಗತ್ಯವಿರುವ ಹಣಕಾಸಿನ ಅಂದಾಜನ್ನು ನೀಡಲು ವಲಯವಾರು ಆಯುಕ್ತರು, ಮುಖ್ಯ ಎಂಜಿನಿಯರ್ ಗಳು ಹಾಗೂ ಮಳೆನೀರುಗಾಲುವೆ ನಿರ್ವಹಣೆ ಅಧಿಕಾರಿಗಳನ್ನು ಒಳಗೊಂಡ ಪ್ರತ್ಯೇಕ ಸಮಿತಿ ರಚಿಸಲಾಗಿದೆ. ಮುಂದಿನ ಒಂದು ವಾರದ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಈ ಅಧಿಕಾರಿಗಳಿಗೆ ಆಯಾ ಪ್ರದೇಶದಲ್ಲಿ ಎಷ್ಟು ಮಳೆ ಬಂದರೆ ಯಾವ ರೀತಿ ತೊಂದರೆಯಾಗುತ್ತದೆ ಎಂಬುದರ ಅರಿವಾಗಿದೆ. ಎಲ್ಲಾ ಕೆರೆಗಳ ನಡುವೆ ಸಂಪರ್ಕ ಏರ್ಪಡಿಸಿ ಮಳೆನೀರು ಸರಾಗವಾಗಿ ಹರಿಯುವಂತೆ ಮಾಡಲು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ಸೂಚಿಸಲಾಗಿದೆ. ಬರಗಾಲದಲ್ಲಿ ಕೆರೆಗಳು ಬತ್ತಿ ಹೋಗಿದ್ದವು. ಕೆರೆಗಳು ತುಂಬಬೇಕು, ಅಂತರ್ಜಲ ಪುನಶ್ಚೇತನಗೊಳ್ಳಬೇಕು. ಹೀಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಕೆರೆಗಳಿಗೆ ಕೊಳಚೆ ನೀರನ್ನು ಹರಿಸುವುದಲ್ಲ, ಕೇವಲ ಮಳೆ ನೀರು ಹೋಗುವಂತೆ ನೋಡಿಕೊಳ್ಳಬೇಕು. ಹೀಗಾಗಿ ಕೆರೆಗಳ ನಡುವೆ ಸಂಪರ್ಕ ಸಾಧಿಸಲು ಯೋಜನೆ ರೂಪಿಸಲು ಸೂಚಿಸಿದ್ದೇನೆ. ಈ ಕಾಮಗಾರಿಗೆ ಎಲ್ಲೆಲ್ಲಿ ಖಾಸಗಿ ಭೂಮಿ ಅಡ್ಡಬರುತ್ತದೆಯೋ ಅಲ್ಲಿ ಟಿಡಿಆರ್ ನೀಡುವ ಮೂಲಕ ಭೂಮಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದೇವೆ. ಇನ್ನು ರಾಜಕಾಲುವೆಗಳ ಒತ್ತುವರಿ ತೆರವಿಗೆ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಪ್ರವಾಹದ ನೀರು ಕೆರೆಗೆ ಹೋಗುವುದು ಹಾಗೂ ಕೆರೆಯಿಂದ ಕೋಡಿ ಬೀಳುವ ನೀರು ಸರಾಗವಾಗಿ ಹೋಗಲು ಅನುವಾಗುವಂತೆ ಗೇಟ್ ಅಳವಡಿಸಲು ಸೂಚಿಸಿದ್ದೇನೆ.

ಇದಕ್ಕೆ ಬೇಕಾಗಿರುವ ಮೂಲ ಸೌಕರ್ಯ ತಯಾರಿ ಮಾಡಿಕೊಳ್ಳಲು ಬಿಡಿಎ, ಬಿಬಿಎಂಪಿ ಹಾಗೂ ಕೆರೆ ಅಭಿವೃದ್ಧಿ ಪ್ರಾಧಿಕಾರದವರಿಗೆ ಸೂಚಿಸಿದ್ದೇನೆ. ರಾಜಕಾಲುವೆ ಅಕ್ಕಪಕ್ಕದಲ್ಲಿ 50 ಅಡಿಗಳಷ್ಟು ಅಂತರದಲ್ಲಿ ಯಾರೂ ಕಟ್ಟಡ ಕಟ್ಟುವಂತಿಲ್ಲ. ಇಂತಹ ಜಾಗವನ್ನು ಗುರುತಿಸಿದ್ದು, ಇಲ್ಲಿ 300 ಕಿ.ಮೀ. ಉದ್ದದ ರಸ್ತೆ ನಿರ್ಮಾಣ ಮಾಡಲಾಗುವುದು. ಇದರಿಂದ ಒತ್ತುವರಿ ನಿಲ್ಲುತ್ತದೆ ಹಾಗೂ ಮಳೆನೀರು ಹರಿಯಲು ನೆರವಾಗುತ್ತದೆ. ಯೋಜನೆಯ ಆರಂಭಿಕ ಹಂತಕ್ಕೆ ಹಣ ಮೀಸಲಿಡಲಾಗಿದೆ. ಈ ಭಾಗದ ಭೂಮಾಲೀಕರಿಗೆ ಟಿಡಿಆರ್ ಮೂಲಕ ಪರಿಹಾರ ನೀಡಲಾಗುವುದು. ಮಳೆ ಪೀಡಿತ ಪ್ರದೇಶಗಳಲ್ಲಿ ಪರಿಹಾರಗಳು ಭರದಿಂದ ಸಾಗುತ್ತಿದೆ. ಕೇಂದ್ರಿಯ ವಿಹಾರ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ನಿವಾಸಿಗಳನ್ನು ಸ್ಥಳಾಂತರ ಮಾಡಿದ್ದೇವೆ. ನೀರನ್ನು ಹೊರತೆಗೆಯಲಾಗುತ್ತಿದೆ. ಕೆಲವು ಕುಟುಂಬಗಳು ಸ್ಥಳಾಂತರಗೊಳ್ಳಲು ಒಪ್ಪದ ಕಾರಣ ಅವರ ಜವಾಬ್ದಾರಿ ವಹಿಸಿಕೊಳ್ಳುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

> ಇನ್ನು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಅನೇಕ ಕಟ್ಟಡಗಳು ಪಾಲಿಕೆ ಗಮನಕ್ಕೆ ಬಂದಿದ್ದು, ಅವುಗಳನ್ನು ಕೂಡಲೇ ಒಡೆದು ಹಾಕಲು ಆದೇಶ ನೀಡಲಾಗಿದೆ. ನಂಜಪ್ಪ ಗಾರ್ಡನ್ ಪ್ರದೇಶದಲ್ಲಿ 10 X 25 ಅಡಿ ನಿವೇಶನದಲ್ಲಿ ನೆಲಮಹಡಿ ಜತೆಗೆ 5 ಮಹಡಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಇದನ್ನು ತೆರವುಗೊಳಿಸಲು ಸೂಚಿಸಿದ್ದೇನೆ. ಪ್ರತಿ ವಲಯದಲ್ಲಿ ಅಕ್ರಮ, ಕಳಪೆ ಗುಣಮಟ್ಟದ ಕಾಮಗಾರಿ ಹಾಗೂ ಜೀವಕ್ಕೆ ಅಪಾಯ ತರಬಹುದಾದ ಕಟ್ಟಡಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದೇನೆ.

> ವಿಪತ್ತು ನಿರ್ವಹಣಾ ಕಾಯ್ದೆ ಅಡಿ ಅಗತ್ಯ ಕ್ರಮ ಕೈಗೊಳ್ಳಲು ನಮಗೆ ಸಂಪೂರ್ಣ ಅಧಿಕಾರವಿದೆ. ಈ ಪರಿಸ್ಥಿತಿಯಲ್ಲಿ ಸರ್ಕಾರ ಯಾವುದೇ ಆಸ್ತಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಕ್ರಮಕೈಗೊಳ್ಳಲು ಅಧಿಕಾರವಿದೆ. ಬಿಎಂಟಿಎಫ್, ಬಿಡಿಎ, ಬಿಬಿಎಂಪಿ, ಬಿಎಂಆರ್ ಡಿಎ ಕೆಲವು ತಿದ್ದುಪಡಿ ತಂದು ಅವರಿಗೆ ಹೆಚ್ಚಿನ ಅಧಿಕಾರ ನೀಡಲಾಗುವುದು. ಈ ಹಿಂದೆಯೂ ಅಧಿಕಾರವನ್ನು ಮೇಲ್ಕಂಡ ಸಂಸ್ಥೆಗಳಿಗೆ ನೀಡಲಾಗಿತ್ತು. ಆದರೆ 2020-21ರ ಸಮಯದಲ್ಲಿ ಅದನ್ನು ಹಿಂಪಡೆಯಲಾಗಿತ್ತು.

## ಶೇಂಗಾಗೆ 6,783ರೂ. ಬೆಂಬಲ ಬೆಲೆಗೆ ಖರೀದಿಸಲು ಕೇಂದ್ರ ಸಮ್ಮತಿ!

• ಉದಯವಾಹಿನಿ ಬೆಂಗಳೂರು

ಬೆಂಬಲ ಬೆಲೆಯಲ್ಲಿ ಶೇಂಗಾ ಖರೀದಿಗೆ ಅನುಮತಿ ನೀಡಬೇಕು ಎಂಬ ರಾಜ್ಯ ಸರ್ಕಾರದ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿಸಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ಈ ಕುರಿತಂತೆ ಮಾತನಾಡಿರುವ ಸಚಿವ ಶಿವಾನಂದ್ ಪಾಟೀಲ್ ಕೇಂದ್ರ ಸರಕಾರವು ಶೇಂಗಾವನ್ನು ಬೆಂಬಲ ಬೆಲೆಗೆ ಖರೀದಿಸಲು ಒಪ್ಪಿಗೆ ನೀಡಿದೆ. ಹಾಗೂ ಪ್ರತಿ ಕ್ವಿಂಟಾಲ್?ಗೆ 6,783 ರೂ. ದರವನ್ನು ನಿಗದಿಪಡಿಸಲಾಗಿದೆ. ಬೆಂಬಲ ಬೆಲೆಯ ಮಾರ್ಗಸೂಚಿ ಅನ್ವಯ ಕೊಪ್ಪಳ, ಧಾರವಾಡ, ಹಾವೇರಿ, ಬಳ್ಳಾರಿ, ಚಿತ್ರದುರ್ಗ, ಗದಗ ಮತ್ತು ಬಾಗಲಕೋಟೆ, ದಾವಣಗೆರೆ, ರಾಯಚೂರು, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳ ರೈತರಿಂದ ಶೇಂಗಾ ಖರೀದಿಗೆ ಅನುಮತಿ ದೊರೆತಿದೆ ಎಂದು ತಿಳಿಸಿದರು. ಬೆಂಬಲ ಬೆಲೆ ಯೋಜನೆಯಡಿ ಶೇಂಗಾ ಖರೀದಿ ಪ್ರಕ್ರಿಯೆಯಲ್ಲಿ ರೈತರಿಗೆ

ಉದಯವಾಹಿನಿ ಚಿತ್ರ

ಯಾವುದೇ ರೀತಿ ಸಮಸ್ಯೆ ಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ನೋಂದಣಿ ಮತ್ತು ಖರೀದಿ ಪ್ರಕ್ರಿಯೆ ಆರಂಭಿಸುವ ಪೂರ್ವದಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಯಾವುದೇ ಖರೀದಿ ಕೇಂದ್ರದಿಂದ ದೂರುಗಳು ಬರಬಾರದು ಎಂದು ಸಚಿವರು ಎಚ್ಚರಿಕೆ ನೀಡಿದ್ದಾರೆ.

ಈಗ ಅನುಮತಿ ದೊರೆತಿರುವ ಶೇಂಗಾ ಸೇರಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಒಟ್ಟು ಎಂಟು ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಖರೀದಿ ಮಾಡಲಾಗಿದೆ. ಇದುವರೆಗೆ ಉಂಡೆ ಕೊಬ್ಬರಿ, ಮಿಲ್ಲಿಂಗ್ ಕೊಬ್ಬರಿ, ಹೆಸರುಕಾಳು, ಉದ್ದಿನಕಾಳು, ಸೋಯಾಬಿನ್, ಸೂರ್ಯಕಾಂತಿ, ಹತ್ತಿಯನ್ನು ಖರೀದಿಸಲಾಗಿದೆ.

> ಶೇಂಗಾ ಖರೀದಿಗೆ ಕೇಂದ್ರ ಸರ್ಕಾರದಿಂದ ಎರಡು, ರಾಜ್ಯ ಸರ್ಕಾರದಿಂದ ನಾಲ್ಕು ಏಜನ್ಸಿಗಳನ್ನು ಗುರುತಿಸಲಾಗಿದೆ. ಅವಶ್ಯಕತೆಗನುಗುಣವಾಗಿ ಖರೀದಿ ಕೇಂದ್ರಗಳನ್ನು ಆರಂಭಿಸಲು ನಾಫೆಡ್ ಸಂಸ್ಥೆ, ಎನ್ಸಿಎಫ್ ಸಂಸ್ಥೆ ಹಾಗೂ ಖರೀದಿ ಏಜನ್ಸಿಗಳೊಂದಿಗೆ ಸಮಾಲೋಚನೆ ನಡೆಸಿ ಖರೀದಿ ಕೇಂದ್ರಗಳನ್ನು ತೆರೆದು ನೋಂದಣಿ ಪ್ರಕ್ರಿಯೆ ಆರಂಭಿಸಬೇಕು ಎಂದು ಜಿಲ

# ನಿಖಿಲ್ ಕುಮಾರಸ್ವಾಮಿ ಬೆನ್ನಿಗೆ ನಿಂತ ಬಿಜೆಪಿ ಘಟಾನುಘಟಿ ನಾಯಕರು

## ● ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ ಯೋಗೇಶ್ವರ್ ವಿರುದ್ಧ ಮಾಜಿ ಪ್ರಧಾನಿಗಳ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಎದುರಾಳಿ

● ಉದಯವಾಹಿನಿ, ಚನ್ನಪಟ್ಟಣ

ಚನ್ನಪಟ್ಟಣದಲ್ಲಿ ಕಾಂಗ್ರೇಸ್ ಅಭ್ಯರ್ಥಿ ಸಿ.ಪಿ ಯೋಗೇಶ್ವರ್ ವಿರುದ್ಧ ಮಾಜಿ ಪ್ರಧಾನಿಗಳ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಅವರು ಎದುರಾಳಿಯಾಗಿ ಕಣಕ್ಕಿಳಿಯುತ್ತಿದ್ದಾರೆ. 2019ರ ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಅಂಬರೀಶ್ ಅವರ ವಿರುದ್ಧ ಸ್ಪರ್ಧಿಸಿದ ಚುನಾವಣೆ ಅಂತೆಯೇ ಚನ್ನಪಟ್ಟಣ ಉಪಚುನಾವಣೆ ಕೂಡ ಹೈವೋಲ್ಟೇಜ್ ಕದನವಾಗಿ ಮಾರ್ಪಟ್ಟಿದ್ದು, ನಿಖಿಲ್ ಕುಮಾರಸ್ವಾಮಿ ಅವರ ಬೆನ್ನಿಗೆ ಬಿಜೆಪಿ ಘಟಾನುಘಟಿ ನಾಯಕರು ನಿಂತಿದ್ದಾರೆ.

ಚನ್ನಪಟ್ಟಣ ಉಪಚುನಾವಣೆ ಟಿಕೆಟ್ ಸಿಗದ ಹಿನ್ನಲೆ ಮಾಜಿ ಸಚಿವ ಸಿ ಪಿ ಯೋಗೇಶ್ವರ್ ಅವರು ಬಿಜೆಪಿಗೆ ರಾಜೀನಾಮೆಯನ್ನ ನೀಡಿ, ಕಾಂಗ್ರೇಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಇತ್ತ ಕಳೆದು ಎರಡು ಚುನಾವಣೆಯಲ್ಲಿ ಸೋಲು ಕಂಡಿರುವ ನಿಖಿಲ್ ಕುಮಾರಸ್ವಾಮಿ ಅವರನ್ನ ಶತಾಯುಗತಾಯ ಗೆಲ್ಲಿಸಿಕೊಂಡು ಬರುವ ನಿಟ್ಟಿನಲ್ಲಿ ಮೈತ್ರಿ ನಾಯಕರು ಮುಂದಾಗಿದ್ದಾರೆ. ಚನ್ನಪಟ್ಟಣ ಚುನಾವಣೆ ಕುರಿತು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಮಾತನಾಡಿ,

> ಸವಾಲಿನ ಚುನಾವಣೆ. ಒಬ್ಬ ವ್ಯಕ್ತಿ ಪಕ್ಷ ಅಂತ ಹೇಳಿ ಈಗ 7ನೇ ಬಾರಿ ಜಿಗಿತ. ಇದು ಸ್ವಾರ್ಥಕ್ಕಾಗಿ ರಾಜಕಾರಣ. ಪಕ್ಷಾಂತರ ಮಾಡುವವರನ್ನು ನಿರ್ಲಕ್ಷ್ಯ ಮಾಡಬೇಕಿದೆ. ಸಿದ್ದರಾಮಯ್ಯ ಡಿ.ಕೆ. ಶಿವಕುಮಾರ್ ಅವರನ್ನು ಯೋಗಿನ ಹಿಂದಕ್ಕೆ ಹಾಕಿದ್ದಾರೆ. ನಾನು ಭಗೀರಥ ಆದ ಯೋಗೇಶ್ವರ್‌ರವರ ಕ್ರೆಡಿಟ್ ತೆಗೆದುಕೊಳ್ಳಲು ಆಗಲ್ಲ. ಅರಣ್ಯ ಸಚಿವರಾಗಿದ್ದರು. ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಬಲವಾಗಿಲ್ಲ. ಒಳ್ಳೆ ಕೆಲಸ ಕೈಗೆತ್ತಿಕ್ಕಬೇಕೆಂದು ತೀರ್ಮಾನ ಮಾಡಿದರು
> -ಸದಾನಂದಗೌಡ, ಮಾಜಿ ಮುಖ್ಯಮಂತ್ರಿ

ಚನ್ನಪಟ್ಟಣ ಉಪಚುನಾವಣೆ ನಾಳಿದ್ದು ತಾಲ್ಲೂಕು ಸಭೆ ಆಯೋಜನೆ ಮಾಡುತ್ತೇವೆ. ಮುಖಂಡರಿಂದ

ಉದಯವಾಹಿನಿ ಚಿತ್ರ

ಕಾರ್ಯಕರ್ತರು ಆದಿಯಾಗಿ ಎಲ್ಲರು ಸಂಪೂರ್ಣ ಸಾಮರ್ಥ್ಯ ಹಾಕಿ ನಿಖಿಲ್ ಕುಮಾರಸ್ವಾಮಿ ಗೆಲುವಿಗೆ ಶ್ರಮಿಸುತ್ತೇವೆ. ನಿಖಿಲ್‌ಗೆ ಮೋದಿ ದೇವೇಗೌಡರು ಆಶೀರ್ವಾದ ಇದೆ. ನೂರಕ್ಕೆ ನೂರಷ್ಟು ಗೆಲ್ಲುತ್ತೇವೆ. ಜೆಡಿಎಸ್ ಬಲಿಷ್ಠವಾಗಿದೆ. ಬಿಜೆಪಿ ತನ್ನದೇ ಆದ ವೋಟ್ ಬ್ಯಾಂಕ್ ಹೊಂದಿದೆ. ಮತದಾರರಿಗೆ ಎನ್ ಡಿಎ ಪರವಾದ ಒಲವು ಇದೆ ಎಂದರು. ಕಾರ್ಯಕರ್ತರ ಸಭೆ ನಡೆಸಿ ನಿಖಿಲ್ ಆಯ್ಕೆ ಮಾಡಿದ್ದಾರೆ. ಕಾರ್ಯಕರ್ತರು ರೆಬೆಲ್ ಆಗಿದ್ದಾರೆ. ಕಾರ್ಯಕರ್ತರ ಅಭಿಪ್ರಾಯ ಸಂಗ್ರಹ ಮಾಡಬಹುದಿತ್ತು. ಕಾಂಗ್ರೇಸ್‌ನ ಒಂದು ಟೀಮ್ ನಮಗೆ ಬೆಂಬಲ ನೀಡಲಿದೆ. ವಾಲ್ಮೀಕಿ, ಮುಡಾ, ಎಸ್ಸಿಎಸ್ಟಿ ಹಣ ದುರುಪಯೋಗ, ಗಣಿ ಹಗರಣದಲ್ಲಿ ಕಾಂಗ್ರೇಸ್ ಶಾಸಕ ಸತೀಶ್ ಸೈಲ್ ಗೆ ಶಿಕ್ಷೆ ಆಗಿದೆ. ಹಗರಣಗಳ ಸರಮಾಲೆ, ಲೂಟಿಕೋರರ ಪಾರ್ಟಿ ಆಗಿದೆ. ಗಣಿ ಹಗರಣದಲ್ಲಿ ಪಾದಯಾತ್ರೆ ಮಾಡಿದರು. ಅದೇ ಪಕ್ಷದ ಶಾಸಕ ಗಣಿ ಲೂಟಿಯಲ್ಲಿ ಜೈಲು ಪಾಲಾಗಿದ್ದಾರೆ. ಲೂಟಿಕೋರ ಪಕ್ಷವನ್ನು ಮತದಾರರು ಗೆಲ್ಲಿಸಲ್ಲ. ನಿಖಿಲ್ ಅವರಿಗೆ ಸಿಂಪತಿ ಇದೆ. ಅಶ್ವತ್ಥ ನಾರಾಯಣರವರು ಯೋಗಿಗೆ ಟಿಕೆಟ್ ಕೊಡಿಸಲು ಹೋರಾಟ ನಡೆಸಿದರು. ಸಿ ಪಿ ಬಿಜೆಪಿಯಲ್ಲಿ ದೊಡ್ಡ ನಾಯಕರಾಗಿದ್ದರು. ಕಾಂಗ್ರೇಸ್‌ನಲ್ಲಿ ಮೂರನೇ ಸಾಲಿನ ನಾಯಕ ಆಗಿದ್ದಾರೆ. ಚುನಾವಣೆ ನಂತರ ಎಷ್ಟನೇ ಸಾಲಿಗೆ ಹೋಗುತ್ತಾರೊ ಗೊತ್ತಿಲ್ಲ. ಕಾಂಗ್ರೇಸ್ ಯೋಗೇಶ್ವರ್ ಅವರನ್ನು ಬಲಿ ಪಡೆಯುತ್ತಿದೆ.

**ನಿಖಿಲ್ ಮೇಲೆ ಸಿಂಪತಿ**

ಬಿಜೆಪಿ ಸರಕಾರದಲ್ಲಿ ನೀಡಿದ ಅನುದಾನ ಬಿಟ್ಟರೆ ಕಾಂಗ್ರೇಸ್ ನಯಾ ಪೈಸೆ ನೀಡಿಲ್ಲ. ಮಳೆಯಿಂದಾಗಿ ತೇಲುತ್ತಿರುವ, ಮುಳುಗುತ್ತಿರುವ ಬೆಂಗಳೂರು ಆಗಿದೆ. ಎಂದು ಕಾಂಗ್ರೇಸ್‌ವಿರುದ್ಧ ವಾಗ್ದಾಳಿ ನಡೆಸಿದರು.

### ಭಗೀರಥ ಅನ್ನುದನ್ನ ಬಿಟ್ಟು ಚುನಾವಣೆ ಎದುರಿಸಬೇಕು

ಮಂಡ್ಯ ಮೈಸೂರುವರೆಗೆ ಹಸಿರು ಕಾಣುತ್ತಿರಲಿಲ್ಲ. ನಾನು ಸಿಎಂ ಆದಾಗ ಆರು ಕೆರೆ ತುಂಬಿಸಿ ಅಭಿವೃದ್ಧಿ ಮಾಡಿದೇವು. ಭಗೀರಥ ಬಿಜೆಪಿ ಸರ್ಕಾರವೇ ಹೊರೆತು ಯೋಗೇಶ್ವರ್ ಅಲ್ಲ. 150 ಕೋಟಿ ಅನುದಾನ ನೀಡಿದೆ. ಇವತ್ತು ಭಗೀರಥ ಅಂತ ಹೇಳಿಕೊಂಡು ಚುನಾವಣೆ ಎದುರಿಸಲು ನಾಚಿಕೆ ಆಗಬೇಕು. ಕಾಂಗ್ರೇಸ್‌ನಲ್ಲಿ ಇದ್ದಾಗ ಏಕೆ ಅನುದಾನ ತಂದು ಕೆರೆ ತುಂಬಿಸಲಿಲ್ಲ. ಅಶ್ವತ್ಥ ನಾರಾಯಣ ಉಸ್ತುವಾರಿ ಆಗಿದ್ದಾಗ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಯೋಗೇಶ್ವರ್ ಮಾನಮರ್ಯಾದೆ ಇದ್ದರೆ ನೀರು ತಂದೆ ಭಗೀರಥ ಅನ್ನುದನ್ನ ಬಿಟ್ಟು ಚುನಾವಣೆ ಎದುರಿಸಬೇಕು.

## ವಿದ್ಯಾರ್ಥಿಸ್ನೇಹಿ ಪ್ರಶ್ನೆಪತ್ರಿಕೆ ವಿನ್ಯಾಸ, ರಚನೆಗೆ ಶಿಕ್ಷಕರ ವೇದಿಕೆಯಿಂದ ಮನವಿಪತ್ರ ಸಲ್ಲಿಕೆ

● ಉದಯವಾಹಿನಿ, ಶಿಡ್ಲಘಟ್ಟ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ವಿಜ್ಞಾನ ಪ್ರಶ್ನೆಪತ್ರಿಕೆಯ ವಿನ್ಯಾಸ ಮತ್ತು ರಚನೆಯಲ್ಲಿ ವಿದ್ಯಾರ್ಥಿಸ್ನೇಹಿಯಾದ ಸೂಕ್ತ ಬದಲಾವಣೆಗಳನ್ನು ತರುವಂತೆ ಕೋರಿ ತಾಲ್ಲೂಕು ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ವೇದಿಕೆಯ ವತಿಯಿಂದ ಕ್ಷೇತ್ರಶಿಕ್ಷಣಾಧಿಕಾರಿ ಸಿ.ಎ.ನರೇಂದ್ರಕುಮಾರ್ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು.

ದೊಡ್ಡತೇಕಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಎಸ್.ಎ.ವಿಶ್ವನಾಥ್ ಮಾತನಾಡಿ, ಕಳೆದ ನಾಲ್ಕೈದು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಮನೋವೈಜ್ಞಾನಿಕ ದೃಷ್ಟಿಕೋನದಿಂದ ವಿಜ್ಞಾನ ಪ್ರಶ್ನೆಪತ್ರಿಕೆಯು ಅತ್ಯಂತ ಕ್ಲಿಷ್ಟಕರ ಮತ್ತು ಗೊಂದಲಮಯವಾಗಿದ್ದು ಗ್ರಾಮೀಣಭಾಗದ ವಿದ್ಯಾರ್ಥಿಗಳಲ್ಲದೇ ನಗರಪ್ರದೇಶದ ಮಕ್ಕಳೂ ಪ್ರಶ್ನೆಪತ್ರಿಕೆಯನ್ನು ಬಿಡಿಸಲು ಕಷ್ಟಕರವಾಗಿದೆ. ರಾಜ್ಯಮಟ್ಟದಲ್ಲಿ ಅತಿ ಬುದ್ಧಿವಂತ ವಿದ್ಯಾರ್ಥಿಗಳೂ ಸಹ ನೂರಕ್ಕೆ ನೂರು ಅಂಕಗಳಿಸುವುದು ಅಸಾಧ್ಯವೆನಿಸಿದೆ. ಇದರಿಂದಾಗಿ ಮುಂದಿನ ಭವಿಷ್ಯದ ಉನ್ನತಶಿಕ್ಷಣ ಮಟ್ಟದಲ್ಲಿ ಯಾರೊಬ್ಬರೂ ವಿಜ್ಞಾನ ವಿಷಯವನ್ನು ಆಯ್ಕೆ

ಉದಯವಾಹಿನಿ ಚಿತ್ರ

ಮಾಡಿಕೊಳ್ಳಲು ಚಿಂತಿಸುವಂತಾಗಿದೆ ಎಂದರು.

ಕುಂದಲಗುರ್ಕಿ ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಪ್ರಶಾಂತಕುಮಾರ್ ಮಾತನಾಡಿ, ಪ್ರಶ್ನೆಪತ್ರಿಕೆಯು ವಿದ್ಯಾರ್ಥಿಸ್ನೇಹಿಯಾ ರಬೇಕಲ್ಲದೇ ಶಿಕ್ಷಕರ ಪ್ರತಿಷ್ಠೆಯಂತಾಗಬಾರದು. ಗ್ರಾಮೀಣ ಮಕ್ಕಳ ಮನೋವೈಜ್ಞಾನಿಕ, ಸಾಮಾಜಿಕ, ಕೌಟುಂಬಿಕ ಶೈಕ್ಷಣಿಕಸ್ಥಿತಿಗತಿ ಮತ್ತಿತರ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿಜ್ಞಾನ ಪ್ರಶ್ನೆಪತ್ರಿಕೆಯು ತಯಾರಾಗುವಂತೆ ವೈಜ್ಞಾನಿಕ ಬದಲಾವಣೆಗಳನ್ನು ತರಬೇಕಾದ ಅಗತ್ಯವಿದೆ ಎಂದರು. ಮನವಿಪತ್ರ ಸಲ್ಲಿಸಿದ ಸಂದರ್ಭದಲ್ಲಿ ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಎಲ್.ವಿ.ವೆಂಕಟರೆಡ್ಡಿ,

> ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಸೃಜಿಸಲು ಮತ್ತು ಗಟ್ಟಿಗೊಳಿಸಲು ಅನ್ವಯಿಕ ಜ್ಞಾನದ ಅಗತ್ಯ ಹೆಚ್ಚಿದೆ. ಹಾಗಾಗಿ 6 ನೇ ತರಗತಿಯಿಂದಲೇ ವಿಜ್ಞಾನವನ್ನು ಮೂಲವಿಜ್ಞಾನ ಮತ್ತು ಅನ್ವಯಿಕ ವಿಷಯವನ್ನಾಗಿ ಬೋಧಿಸಬೇಕಾದ ಅನಿವಾರ್ಯತೆಯಿದ್ದು, ವಿಜ್ಞಾನ ವಿಷಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮಪಡಿಸುವಲ್ಲಿ ರಾಜ್ಯಮಟ್ಟದಲ್ಲಿ ಚರ್ಚೆ ನಡೆಯುತ್ತಿವೆ. -ಸಿ.ಎ.ನರೇಂದ್ರಕುಮಾರ್, ಕ್ಷೇತ್ರಶಿಕ್ಷಣಾಧಿಕಾರಿ,

ಪ್ರಧಾನಕಾರ್ಯದರ್ಶಿ ಎಚ್.ಎಸ್.ರುದ್ರೇಶಮೂರ್ತಿ, ಉಪಾಧ್ಯಕ್ಷ ಎಂ.ಕೆ.ಸಿದ್ದರಾಜು, ಸಹಕಾರ್ಯದರ್ಶಿ ಎಂ.ಶಿವಕುಮಾರ್, ದ್ಯಾವಪ್ಪ, ವೆಂಕಟಮೂರ್ತಿ, ಬಿಆರ್‌ಪಿ ಲಕ್ಷ್ಮೀನಾರಾಯಣ್, ಮತ್ತಿತರರು ಇದ್ದರು.

## ತೂಕದಲ್ಲಿ ಮೋಸ: ಆಭರಣ ಮಳಿಗೆಗಳಿಗೆ ಬೀಗ

● ಉದಯವಾಹಿನಿ, ಮಂಡ್ಯ

ಗ್ರಾಹಕರಿಗೆ ತೂಕದಲ್ಲಿ ವ್ಯತ್ಯಾಸ ಮಾಡುತ್ತಿದ್ದ ಜಿಲ್ಲೆಯ ಪಾಂಡವಪುರ ಪಟ್ಟಣದ ಮೂರು ಆಭರಣ ಮಳಿಗೆಗಳಿಂದ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಗುರುವಾರ ವಶಪಡಿಸಿಕೊಂಡ ರಾಜ್ಯ ಆಹಾರ ಆಯೋಗದ ಸದಸ್ಯರ ತಂಡವು ಮಳಿಗೆಗಳಿಗೆ ಬೀಗ ಜಡಿದಿದೆ. ಮಹಾಲಕ್ಷ್ಮಿ ಬ್ಯಾಂಕರ್ ಅಂಡ್ ಜ್ಯುವೆಲರ್ಸ್, ಮಹೇಂದ್ರ ಜ್ಯುವೆಲರ್ಸ್ ಹಾಗೂ ಲಕ್ಷ್ಮಿ ಜ್ಯುವೆಲರ್ಸ್ ಮಾಲೀಕರಿಗೆ ಕಾನೂನು ಮಾಪನಶಾಸ್ತ್ರ ಅಧಿಕಾರಿಗಳು ಎಚ್ಚರಿಕೆ ನೀಡಿ, ನೋಟಿಸ್ ಜಾರಿ ಮಾಡಿದ್ದಾರೆ.

ಈ ಮಳಿಗೆಗಳಲ್ಲಿದ್ದ ತೂಕದ ಯಂತ್ರಗಳಲ್ಲಿ ಒಂದರಿಂದ ಒಂದೂವರೆ ಗ್ರಾಂನಷ್ಟು ವ್ಯತ್ಯಾಸ ಬರುತ್ತಿತ್ತು. ಅಂದರೆ, ಒಂದು ಗ್ರಾಂ ಚಿನ್ನದ ಮಾರುಕಟ್ಟೆ ಮೌಲ್ಯ ಪ್ರಸ್ತುತ 7 ಸಾವಿರವಿದ್ದು, ಗ್ರಾಹಕರಿಗೆ ದೊಡ್ಡ ಮಟ್ಟದಲ್ಲಿ ಮೋಸವಾಗುತ್ತಿತ್ತು. ಪರವಾನಗಿ ಪಡೆಯದ ಮತ್ತು ನವೀಕರಣ ಮಾಡಿಸಿಕೊಳ್ಳದ ಕಾರಣಗಳೂ ಸೇರಿದಂತೆ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ನಿಯಮಿತವಾಗಿ ಪರಿಶೀಲಿಸದ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ' ಎಂದು

ಉದಯವಾಹಿನಿ ಚಿತ್ರ

ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ತಿಳಿಸಿದರು.

ಪಾಂಡವಪುರ ತಾಲ್ಲೂಕಿನ ದೊಡ್ಡಬ್ಯಾಡರಳ್ಳಿ ನ್ಯಾಯಬೆಲೆ ಅಂಗಡಿ ಮೇಲೆ ದಾಳಿ ಕಾರ್ಯಾಚರಣೆ ನಡೆಸಿದಾಗ 6 ಕ್ವಿಂಟಲ್ ಅಕ್ಕಿ ಹಾಗೂ 6.5 ಕ್ವಿಂಟಲ್ ರಾಗಿ ತೂಕದಲ್ಲಿ ವ್ಯತ್ಯಾಸ ಕಂಡು ಬಂತು. ಕಾರ್ಯದರ್ಶಿ ವಿರುದ್ಧ ಸ್ಥಳೀಯರಿಂದ ದೂರುಗಳಿದ್ದು, ಅಮಾನತು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

ಆಯೋಗದ ಸದಸ್ಯರಾದ ಲಿಂಗರಾಜು ಕೋಟೆ, ಸುಮಂತ್ ರಾವ್, ಮಾರುತಿ ಎಂ, ದೊಡ್ಡಲಿಂಗಣ್ಣರವರ, ಎ.ರೋಹಿಣಿ ಪ್ರಿಯ ಮತ್ತು ಕೆ.ಎಸ್ ವಿಜಯಲಕ್ಷ್ಮಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಗಾಂಜಾ ಮಾರಾಟ: ಆರೋಪಿ ಸೆರೆ, ಮಾಲು ವಶ

● ಉದಯವಾಹಿನಿ, ಬೇತಮಂಗಲ

ಕೆಜಿಎಫ್ ಪೊಲೀಸ್ ಜಿಲ್ಲೆಯಸೈಬರ್ ಕ್ರೈಂ ಪೊಲೀಸ್ ಠಾಣೆಯ ಪೊಲೀಸರು ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿಯೊಬ್ಬನನ್ನು ಬಂಧಿಸಿ. ಆತನಿಂದ ಸುಮಾರು 2,20,000/- ರೂಪಾಯಿ ಮೌಲ್ಯದ 2 ಕೆ.ಜಿ 720 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಅ.24 ರಂದು ಬೇತಮಂಗಲ ಪೊಲೀಸ್ ಠಾಣಾ ಸರಹದ್ದು, ಬೇತಮಂಗಲ-ಕೋಲಾರ ಮುಖ್ಯ ರಸ್ತೆಯ ಬಡಮಾಕನ ಹಳ್ಳಿ ಅರಣ್ಯ ಪ್ರದೇಶ ಬಳಿ ಗಾಂಜಾ ಮಾರಾಟದ ಕುರಿತು ಖಚಿತ ಮಾಹಿತಿ ಆಧರಿಸಿ, ಸೈಬರ್ ಕ್ರೈಂ ಅಪರಾಧ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣ ಮತ್ತು ಸಿಬ್ಬಂದಿಗಳು ಕೂಡಲೇ ದಾಳಿ ನಡೆಸಿ, ಬಡಮಾಕನಹಳ್ಳಿ ನಿವಾಸಿ ನಾಗರಾಜ್


ಉದಯವಾಹಿನಿ ಚಿತ್ರ

ಎಂಬಾತನನ್ನು ಬಂಧಿಸಿ, ಆತನಿಂದ ಸುಮಾರು 2,20,000/- ರೂಪಾಯಿ ಮೌಲ್ಯದ 2 ಕೆ.ಜಿ 720 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿರುತ್ತಾರೆ. ಆರೋಪಿಯನ್ನು ಬಂಧಿಸಿ. ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಪಿಐ ಲಕ್ಷ್ಮೀನಾರಾಯಣ ಮತ್ತು ಸಿಬ್ಬಂದಿಗಳಾದ ಚೇತನ್ ಕುಮಾರ್ , ರಮೇಶ್, ಶೇಷಾದ್ರಿ, ರಘುನಾಥ್, ಚೇತನ್ ಯಾದವ್, ಮತ್ತು ಜೀಪ್ ಚಾಲಕ ಶರಣಕುಮಾರ್‌ರವರುಗಳನ್ನೊಳಗೊಂಡ ತಂಡವು ಯಶಸ್ವಿಯಾಗಿದ್ದು, ತಂಡವನ್ನು ಪೊಲೀಸ್ ವರಿಷ್ಠಾಧಿಕಾರಿಗಳು ಶ್ಲಾಘಿಸಿದ್ದಾರೆ.

## ರೋಗವೇ ಬರದಂತೆ ಬದುಕು ನಡೆಸುವುದನ್ನು ಎಲ್ಲರೂ ಕಲಿಯಬೇಕು

● ಉದಯವಾಹಿನಿ, ಶಿಡ್ಲಘಟ್ಟ

ಮನುಷ್ಯನಿಗೆ ಮಾನಸಿಕ ಸಂತೋಷವೇ ಬಹು ಮುಖ್ಯವಾಗಿದ್ದು, ಮನುಷ್ಯ ಆರೋಗ್ಯದಿಂದ ಇದ್ದಾಗ ಮಾತ್ರ ಜಗತ್ತಿನ ಎಲ್ಲಾ ಸುಖಗಳನ್ನು ಅನುಭವಿಸಲು ಸಾಧ್ಯ ಮಾಜಿ ಶಾಸಕ ಎಂ ರಾಜಣ್ಣ ಹೇಳಿದರು. ತಾಲ್ಲೂಕಿನ ಗಡಿ ಭಾಗದ ದಿಬ್ಬೂರಹಳ್ಳಿ ಗ್ರಾಮದಲ್ಲಿ ಸ್ಪರ್ಶ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದರು.

ರೋಗ ರುಜಿನಗಳು ಮನುಷ್ಯನಿಗೆ ಸಹಜ. ರೋಗ ಬಂದ ನಂತರ ವೈದ್ಯರನ್ನು ಕಾಣುವುದು ಇದ್ದೇ ಇರುತ್ತದೆ. ಆದರೆ ರೋಗವೇ ಬರದಂತೆ ಬದುಕು ನಡೆಸುವುದನ್ನು ಇಂದು ಎಲ್ಲರೂ ಕಲಿಯಬೇಕು.

ಮುನ್ನೆಚ್ಚರಿಕೆಯಿಂದಲೇ ಆರೋಗ್ಯ ರಕ್ಷಿಸಿಕೊಳ್ಳುವುದಕ್ಕೆ ಒತ್ತು ನೀಡಬೇಕು. ಅಧಿಕಾರ, ಸಂಪತ್ತು ಮತ್ತು ಪ್ರಸಿದ್ಧಿಯಿಂದ ಬದುಕು ಸಂಪೂರ್ಣವಾಗದು. ಮನಸ್ಸಿನಿಂದ ಸದೃಢ ಮತ್ತು ದೈಹಿಕವಾಗಿ ಇದ್ದರೆ ಮಾತ್ರ ಆರೋಗ್ಯದಿಂದ ಇರಲು ಸಾಧ್ಯ ಎಂದರು. ಜಿಮ್‌ಗೆ ಹೋಗುವವರಿ


ಉದಯವಾಹಿನಿ ಚಿತ್ರ

ಗಿಂತಲೂ ಕಷ್ಟಪಟ್ಟು ತೋಟದಲ್ಲಿ ಶ್ರಮ ಪಡುವವರೇ ಆರೋಗ್ಯದಿಂದ ಇದ್ದಾರೆ, ವೈದ್ಯರು ರೋಗಿಗೆ ಮಾನಸಿಕ ಸ್ಥೈರ್ಯ ತುಂಬಬೇಕು. ಕಾಯ ಸದೃಢವಾಗಿರಬೇಕು, ಮನಸ್ಸು ಪ್ರಸನ್ನವಾಗಿರಬೇಕು. ಹೃದಯ ದ್ವೇಷದಿಂದ ಮುಕ್ತವಾಗಿದ್ದಾಗ ಮಾತ್ರ ನಿಜವಾದ ಆರೋಗ್ಯ ಸಾಧ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ ದೊಡ್ಡತೇಕಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಟಿ.ಎಸ್ ಗೋಪಾಲರೆಡ್ಡಿ ,ದಿಬ್ಬೂರಹಳ್ಳಿ ಪಿ ಎಸ್ ಐ ಶ್ಯಾಮಲ, ಲಿಯೋ ಕ್ಲಬ್

> ಆಸ್ಪತ್ರೆಗಳು ಮತ್ತು ವೈದ್ಯರು ಬಡವರಿಗೆ ಉತ್ತಮ ಆರೋಗ್ಯ ಕಲ್ಪಿಸುವುದಕ್ಕೆ ಶ್ರಮಿಸಬೇಕು. ದೇಹಕ್ಕೆ ಮಾತ್ರ ಶಸ್ತ್ರಚಿಕಿತ್ಸೆ ಮಾಡಿದರೆ ಸಾಲದು. ಮನಸ್ಸಿಗೂ ಇಂದು ಹೆಚ್ಚಿನ ಚಿಕಿತ್ಸೆಗಳು ಅಗತ್ಯವಿದೆ. ದೇಹ-ಮನಸ್ಸು ಸರಿಯಾಗಿರಲು ವೈದ್ಯರ ಮಾತುಗಳನ್ನು ಕೇಳಬೇಕು. ಉಯುಕ್ತವಾದ ಆಹಾರ, ನಿದ್ದೆ ಮತ್ತು ಮನಸ್ಸಿನಿಂದ ಮಾತ್ರ ಆರೋಗ್ಯ ಸಾಧ್ಯ. ದುಡಿದು ಉಣ್ಣಬೇಕು. ಕಾಯಕದ ಬದುಕಿನಿಂದ ಮಾತ್ರ ನೆಮ್ಮದಿ ಸಾಧ್ಯ
> -ಆಂಜಿನಪ್ಪ (ಪುಟ್ಟು), ಕಾಂಗ್ರೇಸ್ ಮುಖಂಡರು.

ನ ಅಧ್ಯಕ್ಷ ಶ್ರೀಕಾಂತ್, ಕೆಂಪಾಪುರ ಗೋವಿಂದಗೌಡ, ಆಂಜಿನಪ್ಪ, ಸಂದೀಪ್ ಟಿ.ಜಿ,ಗೋಪಿ,ಲಿಯೋಕ್ಲಬ್ ಕಾರ್ಯದರ್ಶಿ ಲೋಕೇಶ್, ಮತ್ತಿತರರು ಪಾಲ್ಗೊಂಡಿದ್ದರು.

## ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕೋಟ್ಪಾ ಕಾಯ್ದೆ ಅನುಷ್ಠಾನಕ್ಕೆ ಸೂಚನೆ

● ಉದಯವಾಹಿನಿ, ತುಮಕೂರು

ಜಿಲ್ಲೆಯಲ್ಲಿ ಕೋಟ್ಪಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಬೇಕೆಂದು ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಮ್ಮ ಕೊಠಡಿಯಲ್ಲಿ ಜರುಗಿದ ತಂಬಾಕು ನಿಯಂತ್ರಣ

## ಅಂತರಾಳದಿಂದ... EDITORIAL

### ಕಾಂಗ್ರೇಸ್‌ಗೆ ಹೊಸ ದಿಕ್ಕು ನೀಡಬಹುದೇ

# ಪ್ರಿಯಾಂಕಾ ರಾಜಕೀಯ ಪ್ರವೇಶ

ಈಬಾರಿಯ ಲೋಕಸಭಾ ಉಪಚುನಾವಣೆಯು ಪ್ರಿಯಾಂಕಾ ಗಾಂಧಿಯ ಅಧಿಕೃತ ರಾಜಕೀಯ ಪ್ರವೇಶದ ಮೂಲಕ ಮಹತ್ವವನ್ನು ಪಡೆದುಕೊಂಡಿದೆ ವಯನಾಡ್ ಲೋಕಸಭೆ ಕ್ಷೇತ್ರಕ್ಕೆ ಕಾಂಗ್ರೇಸ್ ಅಭ್ಯರ್ಥಿಯಾಗಿ ಪ್ರಿಯಾಂಕಾ ಅವರು ಬುಧವಾರ ನಾಮಪತ್ರ ಸಲ್ಲಿಸುತ್ತಿರುವುದು. ಭವಿಷ್ಯದಲ್ಲಿ ರಾಷ್ಟ್ರಮಟ್ಟದ ರಾಜಕೀಯ ಹೊಸ ತಿರುವು ಪಡೆಯಲಿರುವ ಸೂಚನೆಯೇ ಎನ್ನುವ ಚರ್ಚೆ ಈಗಾಗಲೇ ಆರಂಭಗೊಂಡಿದೆ. ಕಾಂಗ್ರೇಸ್ ಪಕ್ಷದೊಳಗಿರುವ ಕೆಲವು ನಾಯಕರು, ರಾಹುಲ್‌ಗಾಂಧಿಗಿಂತ ಪ್ರಿಯಾಂಕಾಗಾಂಧಿಯ ಮೇಲೆ ಒಳಗೊಳಗೆ ಹೆಚ್ಚು ಭರವಸೆ ಇಟ್ಟುಕೊಂಡಿದ್ದಾರೆ. ಬಿಕ್ಕಟ್ಟಿನ ಸಂದರ್ಭದಲ್ಲಿ ರಾಹುಲ್ ಗಾಂಧಿ ಕಾಂಗ್ರೇಸ್ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿದ್ದಾರಾದರೂ ನರೇಂದ್ರ ಮೋದಿಗೆ ರಾಹುಲ್ ಪರ್ಯಾಯವಾಗಬಲ್ಲರೆ? ಎನ್ನುವ ವಿಶ್ವಾಸದ ಕೊರತೆ ಕಾಂಗ್ರೇಸ್ ಒಳಗೆ ಇನ್ನೂ ಇದ್ದೇ ಇದೆ. ಬಿಜೆಪಿಯ ಐಟಿ ಸೆಲ್, ಮಾರಾಟಗೊಂಡಿರುವ ಮಾಧ್ಯಮಗಳು ಮತ್ತು ಸಂಘಪರಿವಾರದ ಕಾರ್ಯಕರ್ತರ ರಾಹುಲ್ ವಿರೋಧಿ ಅಪಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಕಾಂಗ್ರೇಸ್ ವಿಫಲವಾಗಿದೆ. ಇಂತಹ ಸಂದರ್ಭದಲ್ಲಿ ಪ್ರಿಯಾಂಕಾ ಗಾಂಧಿಯೊಳಗೆ ಇಂದಿರಾಗಾಂಧಿಯನ್ನು ಹುಡುಕುತ್ತಿರುವ ಕಾಂಗ್ರೇಸ್ ನಾಯಕರಿಗೆ ವಯನಾಡ್ ಉಪಚುನಾವಣೆ ಹೊಸ ಹುರುಪನ್ನು ನೀಡಿದೆ. ಪ್ರಿಯಾಂಕಾ ಗಾಂಧಿಗೆ ರಾಜಕೀಯ ಹೊಸತೇನೂ ಅಲ್ಲ. ತಂದೆಯ ಕಾಲದಲ್ಲೇ ಕಾಂಗ್ರೇಸ್ ಪರ ಪ್ರಚಾರ ಮಾಡಿದ ಅನುಭವ ತನಗಿದೆ ಎಂದು ಅವರು ಈಗಾಗಲೇ ಹೇಳಿಕೊಂಡಿದ್ದಾರೆ. 2004ರಲ್ಲಿ ರಾಜಕೀಯ ಪ್ರವೇಶ ಮಾಡಿದ ಅವರು, ಅಮೇಠಿ, ರಾಯ್‌ಬರೇಲಿಗಳಲ್ಲಿ ತನ್ನ ತಾಯಿ ಮತ್ತು ಸೋದರೆ ರಾಹುಲ್ ಗಾಂಧಿಯ ಪರವಾಗಿ ಪ್ರಚಾರ ನಡೆಸಿದ್ದಾರೆ. ಅಮೇಠಿಯಲ್ಲಿ ಪ್ರಿಯಾಂಕಾ ಸ್ಪರ್ಧಿಸಬೇಕು ಎನ್ನುವುದು ಅಲ್ಲಿನ ಕಾಂಗ್ರೇಸ್ ನಾಯಕರ ಬಹು ಹಿಂದಿನ ಬೇಡಿಕೆಯಾಗಿದೆ. ಪ್ರಿಯಾಂಕಾ ಅಮೇಠಿಯ ಮಗಳು ಎನ್ನುವುದು ಅಲ್ಲಿನ ಕಾಂಗ್ರೇಸ್ ನಾಯಕರ ನಿತ್ಯ ಘೋಷಣೆಯಾಗಿದೆ. 2019ರಲ್ಲಿ ಪ್ರಿಯಾಂಕಾ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾದ ಬಳಿಕ ಕಾಂಗ್ರೇಸ್ ಪರವಾಗಿ ಬೀದಿಗಿಳಿದು ಕಾರ್ಯನಿರ್ವಹಿಸಿದ್ದಾರೆ. 2020ರಲ್ಲಿ ಸೋನಿಯಾಗಾಂಧಿಯವರ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್ ನಿಧನರಾದಾಗ, ಪ್ರಿಯಾಂಕಾ ಅ ಕೊರತೆಯನ್ನು ತುಂಬುವ ಪ್ರಯತ್ನವನ್ನು ನಡೆಸಿದರು. ರಾಜಸ್ಥಾನ, ಹಿಮಾಚಲ ಪ್ರದೇಶ, ಛತ್ತೀಸ್‌ಗಡದಲ್ಲಿ ಕಾಂಗ್ರೇಸ್‌ನೊಳಗಿನ ಬಿಕ್ಕಟ್ಟುಗಳನ್ನು ಪರಿಹರಿಸಲು ಪ್ರಿಯಾಂಕಾ ಮಧ್ಯವರ್ತಿಯಾಗಿ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ರಾಹುಲ್‌ಗಾಂಧಿಯನ್ನು ಉತ್ತರದ ಅಮೇಠಿ ತಿರಸ್ಕರಿಸಿದಾಗ ಅವರನ್ನು ಸ್ವೀಕರಿಸಿದ್ದು ಕೇರಳದ ವಯನಾಡ್. ಉತ್ತರ ಭಾರತವನ್ನು ನಿಧಾನಕ್ಕೆ ಸಂಘಪರಿವಾರ ತನ್ನ ಬಾಹುಗಳಲ್ಲಿ ತೆಗೆದುಕೊಳ್ಳುತ್ತಿದ್ದಂತೆಯೇ, ರಾಹುಲ್‌ಗಾಂಧಿಗೆ ಆಶ್ರಯ ಪಡೆಯಲು ಕೇರಳಕ್ಕಿಂತ ಒಳ್ಳೆಯ ಜಾಗ ಇನ್ನೊಂದು ಇರಲಿಲ್ಲ. ಯಾಕೆಂದರೆ ಕೇರಳ ಹಲವು ಕಾರಣಗಳಿಗಾಗಿ ಮಾದರಿ ರಾಜ್ಯವಾಗಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಸಂಘಪರಿವಾರ ರಾಜಕೀಯವಾಗಿ ಅಸ್ತಿತ್ವವನ್ನು ಪಡೆಯಲು ಕೇರಳದಲ್ಲಿ ಇನ್ನೂ ತಿಣುಕಾಡುತ್ತಿದೆ. ಇಂದಿರಾಗಾಂಧಿಗೆ ಕರ್ನಾಟಕದ ಚಿಕ್ಕಮಗಳೂರು ಮರುಜನ್ಮ ನೀಡಿದಂತೆಯೇ ರಾಹುಲ್‌ಗಾಂಧಿಗೆ ವಯನಾಡ್ ಮರುಜನ್ಮವನ್ನು ನೀಡಿತ್ತು. ಆದರೆ ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಹುಲ್‌ಗಾಂಧಿ ರಾಯ್‌ಬರೇಲಿಯಲ್ಲಿ ಗೆದ್ದಿರುವುದರಿಂದ, ಏಕಾಏಕಿ ವಯನಾಡನ್ನು ತ್ಯಜಿಸಲು ನಿರ್ಧರಿಸಿದರು. ಇದು ಕೇರಳದ ಕಾಂಗ್ರೇಸ್‌ನಾಯಕರನ್ನು ತೀರಾ ಮುಜುಗರಕ್ಕೆ ತಳ್ಳಿತ್ತು. ಭೀಕರ ಪ್ರಕೃತಿ ವಿಕೋಪದಿಂದ ವಯನಾಡ್ ತತ್ತರಿಸಿ ಕೂತಿರುವ ಹೊತ್ತಿಗೆ ರಾಹುಲ್‌ಗಾಂಧಿ ವಯನಾಡ್ ಕ್ಷೇತ್ರದ ಜನರನ್ನು ತನ್ನ ರಾಜಕೀಯಕ್ಕೆ ಬಳಸಿಕೊಂಡು ಕೈ ಬಿಟ್ಟರು ಎನ್ನುವ ಅಸಮಾಧಾನವೊಂದು ನಿಧಾನಕ್ಕೆ ಬೆಳೆಯುತ್ತಿತ್ತು.

**ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಎದುರಾದ ಸೋಲಿನಿಂದ ಅವರು ಕಂಗೆಡಲಿಲ್ಲ. ತನ್ನ ಸೋದರನ ನೇತೃತ್ವದ ರಾಷ್ಟ್ರಮಟ್ಟದ ಯಾತ್ರೆಗಳಲ್ಲೂ ಅವರು ಜೊತೆ ನಿಂತರು ಲೋಕಸಭಾ ಸದಸ್ಯರಾಗಿ, ಸಂಸದನಾಗಿ ರಾಹುಲ್‌ಗಾಂಧಿಗೆ ಪ್ರಿಯಾಂಕಾಗಾಂಧಿಗಿಂತ ಹೆಚ್ಚು ಅನುಭವವಿದೆ ನಿಜ, ಆದರೆ, ಅಧಿಕಾರದಿಂದ ದೂರವಿದ್ದು ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಜನಸಾಮಾನ್ಯರ ಜೊತೆ ಸಂಪರ್ಕ ಬೆಸೆಯುವ ವಿಷಯದಲ್ಲಿ ಪ್ರಿಯಾಂಕಾ ಯಾವತ್ತೂ ಹಿಂದೆ ಬಿದ್ದಿಲ್ಲ. ಈ ಎಲ್ಲ ಕಾರಣಗಳಿಂದ, ವಯನಾಡಿನ ಮೂಲಕ ಪ್ರಿಯಾಂಕಾ ರಾಜಕೀಯ ಪ್ರವೇಶ, ಕಾಂಗ್ರೇಸ್ ಪಕ್ಷಕ್ಕೆ ರಾಷ್ಟ್ರಮಟ್ಟದಲ್ಲಿ ಹೊಸದಿಕ್ಕನ್ನು ನೀಡಲಿದೆ ಎಂದು ಕಾಂಗ್ರೇಸ್‌ನೊಳಗಿರುವ ಕೆಲವು ನಾಯಕರು ಒಳಗೊಳಗೆ ಮಂದಿಗೆ ತಿನ್ನುತ್ತಿದ್ದಾರೆ.**

ಆದರೆ ರಾಹುಲ್ ತ್ಯಜಿಸಿದ ಕ್ಷೇತ್ರವನ್ನು ಪ್ರಿಯಾಂಕಾಗಾಂಧಿ ಸ್ವೀಕರಿಸುವ ಮೂಲಕ ಅಲ್ಲಿನ ಕಾಂಗ್ರೇಸ್ ನಾಯಕರು ಬಹುದೊಡ್ಡ ಮುಜುಗರದಿಂದ ಪಾರಾಗಿದ್ದಾರೆ. ರಾಯ್ ಬರೇಲಿಯನ್ನು ಕೇಂದ್ರವಾಗಿಟ್ಟುಕೊಂಡು ರಾಹುಲ್ ಗಾಂಧಿ ಉತ್ತರಭಾರತದಲ್ಲಿ ಕಾಂಗ್ರೇಸನ್ನು ಮುನ್ನಡೆಸಿದರೆ, ವಯನಾಡಲ್ಲಿ ಪ್ರಿಯಾಂಕಾ ಗಾಂಧಿ ರಾಜಕೀಯವಾಗಿ ಬೇರಿಳಿಸಿಕೊಂಡು ದಕ್ಷಿಣ ಭಾರತವನ್ನು ಹಿಡಿತಕ್ಕೆ ತಂದುಕೊಳ್ಳುವ ಯೋಜನೆಯೊಂದು ಈ ಮೂಲಕ ರೂಪ ಪಡೆದಂತಾಗಿದೆ. ವಯನಾಡಿನಲ್ಲಿ ಗೆಲ್ಲುವುದು ಪ್ರಿಯಾಂಕಾ ಗಾಂಧಿಗೆ ಕಷ್ಟಕರವೇನೂ ಇಲ್ಲ. ರಾಹುಲ್ ಗಾಂಧಿಗಿಂತಲೂ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುವ ಸಾಧ್ಯತೆಗಳು ಇವೆ. ಆದರೆ, ಸಂಸತ್‌ಗೆ ಪ್ರವೇಶಿಸಲು ಇದನ್ನೊಂದು ಏಣಿಯಾಗಿ ಬಳಸಿಕೊಂಡು ಅಣ್ಣನಂತೆಯೇ ತಂಗಿಯೂ ವಯನಾಡನ್ನು ಭವಿಷ್ಯದಲ್ಲಿ ತೊರೆದು ಬಿಡಬಹುದು ಎನ್ನುವ ಅನುಮಾನ ಈಗಲೂ ಸ್ಥಳೀಯರಲ್ಲಿದೆ. ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ರಾಯ್ ಬರೇಲಿಯಲ್ಲಿ ಗೆದ್ದ ಬೆನ್ನಿಗೇ ವಯನಾಡು ರಾಹುಲ್‌ಗಾಂಧಿಗೆ ಬೇಡವಾಯಿತು. ಮುಂದಿನ ದಿನಗಳಲ್ಲಿ ಇದೇ ದಾರಿಯನ್ನು ಪ್ರಿಯಾಂಕಾಗಾಂಧಿಯೂ ಹಿಡಿದರೆ ಎನ್ನುವ ಜನರ ಪ್ರಶ್ನೆಗೆ ಪ್ರಿಯಾಂಕಾ ಗಾಂಧಿ ಚುನಾವಣಾ ಪ್ರಚಾರದ ಸ್ಪಷ್ಟ ಉತ್ತರವನ್ನು ನೀಡಬೇಕಾಗುತ್ತದೆ. ಉತ್ತರ ಭಾರತ-ದಕ್ಷಿಣ ಭಾರತದ ನಡುವಿನ ಬಿಕ್ಕಟ್ಟು ತೀವ್ರವಾಗುತ್ತಿರುವ ಈ ದಿನಗಳಲ್ಲಿ ಉತ್ತರ-ದಕ್ಷಿಣವನ್ನು ಬೆಸೆಯಲು ಪ್ರಿಯಾಂಕಾಗಾಂಧಿ ಇ ಸಂದರ್ಭವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ. ಕಾಂಗ್ರೇಸನ್ನು ಹೊಸದಾಗಿ ಕಟ್ಟುವುದಕ್ಕೆ ಮತ್ತು ದಕ್ಷಿಣ ಭಾರತೀಯರಲ್ಲಿ ಕಾಂಗ್ರೇಸ್ ಕುರಿತಂತೆ ಇರುವ ಪರಕೀಯತೆಯನ್ನು ಅಳಿಸುವುದಕ್ಕೆ ಪ್ರಿಯಾಂಕಾ ಅವರಿಗೆ ಸಾಧ್ಯವಾಗಬೇಕಾಗಿದೆ. ಪ್ರಿಯಾಂಕಾ ಗಾಂಧಿಯ ಸ್ಪರ್ಧೆ, ದಕ್ಷಿಣ ಭಾರತದ ಪ್ರಾದೇಶಿಕ ಪಕ್ಷಗಳಿಗೂ ಸವಾಲಾಗಿದೆ. ಕೇರಳದ ಎಡ ಪಕ್ಷಗಳು ರಾಹುಲ್ ಗಾಂಧಿಯ ಬಗ್ಗೆ ದಾಳಿ ನಡೆಸುವ ಯಾವುದೇ ಅವಕಾಶಗಳನ್ನು ಬಿಟ್ಟುಕೊಟ್ಟಿರಲಿಲ್ಲ. ಎಡಪಂಥೀಯರು ಕೇರಳದಲ್ಲಿ ಕಟ್ಟಿ ಬೆಳೆಸಿದ ಜಾತ್ಯತೀತ ವಾತಾವರಣದ ಹುಲುಸಾದ ಬೆಳೆಯನ್ನು ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೇಸ್ ಮೇಯಲು ಹೊರಟಿದೆ ಎನ್ನುವ ಅಸಮಾಧಾನ ಅವರಲ್ಲಿದೆ. ಈ ಆತಂಕ ತಮಿಳು ನಾಡು, ಆಂಧ್ರದ ಜಾತ್ಯತೀತ ಪ್ರಾದೇಶಿಕ ಪಕ್ಷಗಳನ್ನು ಕೂಡ ಕಾಡಿದರೆ ಅಚ್ಚರಿಯಿಲ್ಲ.

## ರಾಮಾಯಣ

### ತಾಟಕಿಯ ವೃತಾಂತ

• ಹಿಂದಿನ ಸಂಚಿಕೆಯಿಂದ 16ನೆಯ ಅಧ್ಯಾಯ

ಆಮೇಲೆ ರಘುನಾಥನು ವಿಶ್ವಾಮಿತ್ರಮುನೀಶ್ವರನನ್ನು ಕುರಿತು ಮುನಿಗಳೆ, ತಾಟಕಿಯು ಸ್ತ್ರೀಯಾಗಿರುವಳು ಆಕೆಗೆ ಸಾವಿರ ಆನೆಗಳ ಸತ್ಯವು ಹೇಗೆ ಬಂದಿತು ಎಂದು ಕೇಳಿದನು ಆ ಮುನೀಶ್ವರನು ಶ್ರೀರಾಮ, ಪೂರ್ವದಲ್ಲಿ ಸುಕೇತುವೆಂಬ ಯಕ್ಷನು ಮಹಾಪರಾಕ್ರಮಿಯಾಗಿದ್ದನು. ಆತನು ಸಂತಾನವಿಲ್ಲದೆ ಬ್ರಹ್ಮದೇವನನ್ನು ಕುರಿತು ಮಹತ್ತಾದ ತಪಸ್ಸನ್ನು ಮಾಡಲು ಸುಕೇತುವಿನ ತಪಸ್ಸಿಗೆ ಸುಪ್ರೀತನಾಗಿ ಬ್ರಹ್ಮನು ಒಂದು ಕನ್ಯಾರತ್ನವನ್ನು ಕೊಟ್ಟು, ಆ ಕನ್ಯಕೆಯು ಸಾವಿರ ಆನೆಗಳ ಸಾಹಸವುಳ್ಳವಳಾಗಿರಲೆಂದು ವರವನ್ನು ಕೊಟ್ಟನು. ಗಂಡು ಸಂತಾನವನ್ನು ಕೊಡಲಿಲ್ಲ. ಆ ಕನ್ಯಕೆಯು ತಾಟಕಿ ಎಂಬ ಹೆಸರಿನಿಂದ ದಿನದಿನಕ್ಕೆ ಬೆಳೆದು ರೂಪ ಯೌವನದಿಂದ ಮೋಹನಾಕಾರವುಳ್ಳವಳಾದಳು.

ಸುಕೇತುವು ತಾಟಕಿಯನ್ನು ಜಂಭನೆಂಬ ಯಕ್ಷನ ಮಗನಾದ ಸುಂದನಿಗೆ ಕೊಟ್ಟು ವಿವಾಹ ಮಾಡಿದನು ಕೆಲವು ಕಾಲದ ಮೇಲೆ ಅವಳು ಮಾರೀಚನೆಂಬ ಮಗನನ್ನು ಪಡೆದಳು. ಮಾರೀಚನು ಶಾಪದಿಂದ ರಾಕ್ಷಸನಾದನು. ಕೆಲವು ಕಾಲದ ಮೇಲೆ ತಾಟಕಿಯ ಗಂಡನಾದ ಸುಂದನು ಲೋಕಾಂತರವನ್ನೈದಿದನು. ಆಮೇಲೆ ತಾಟಕಿಯು ತನ್ನ ಮಗನಾದ ಮಾರೀಚನಿಂದ ಸಹಿತಳಾಗಿ ಸಂಚರಿಸುತ್ತ ಈ ವನದ ಸಮೀಪದಲ್ಲಿ ಆಶ್ರಮವನ್ನು ಮಾಡಿಕೊಂಡು ಕಾಮಬಾಣಗಳಿಂದ ನೊಂದವಳಾಗಿ ದಿಗಂಬರೆಯಾಗಿ ಮನೋಹರ ವಾದ ಗಾನವನ್ನು ಮಾಡುತ್ತ ಈ ವನದಲ್ಲಿದ್ದ ಅಗಸ್ತ್ಯಮುನೀಶ್ವರನ ಸಮೀಪಕ್ಕೆ ಬರುತ್ತಿದ್ದಳು. ಅಗಸ್ತ್ಯಮುನೀಶ್ವರನು ಮನೋಹರವಾದ ಸ್ವರೂಪವುಳ್ಳ ತಾಟಕಿಯನ್ನೂ ಅವಳ ಸಂಗಡ ಬರುತ್ತಿದ್ದ ಮಾರೀಚನನ್ನೂ ಕಂಡು ಅತಿಕೋಪದಿಂದ ಯಜ್ಞಪುರುಷನಿಗೆ ಸಮಾನನಾಗಿ 'ಎಲೈ ಮಾರೀಚನೆ, ನೀನು ರಾಕ್ಷಸತ್ವವನ್ನು ಅನುಭವಿಸು' ಎಂದು ಶಾಪವನ್ನು ಕೊಟ್ಟು ತಾಟಕಿಯನ್ನು ನೋಡಿ 'ಎಲೈ ತಾಟಕಿಯೆ, ನಿನ್ನ ಮನೋಹರವಾದ ಶರೀರವು ಕಾಮಿಗಳಾಗಿ ಯೌವನಸ್ಥರಾದ ಪುರುಷರಿಗೆ ಭಯಂಕರವಾಗಿ ತೋರಲಿ' ಎಂದು ಶಪಿಸಿದನು ಆ ಶಾಪದಿಂದ ಕಂಗೆಟ್ಟು ಕೋಪಾತಿಶಯದಿಂದ ಮೈಮರೆತವಳಾಗಿ ಅಗಸ್ತ್ಯಮುನೀಶ್ವರನು ವಾಸಮಾಡುತ್ತಿದ್ದ ಈ ದೇಶವನ್ನು ಹಾಳುಮಾಡುತ್ತಿದ್ದಾಳೆ. ಆದಕಾರಣ ಪಾಪಿಷ್ಠೆಯಾಗಿ ಯಾರಿಗೂ ಕೊಲ್ಲಲು ಸಾಧ್ಯವಲ್ಲದಿರುವ ತಾಟಕಿ ಎಂಬ ಯಕ್ಷಸ್ತ್ರೀಯನ್ನು ಗೋಬ್ರಾಹ್ಮಣಹಿತಾರ್ಥವಾಗಿ ಸಂಹರಿಸು ನಿನಗೆ ಹೊರತಾಗಿ ಅವಳು ಮತ್ತಾರಿಗೂ ಸಾಧ್ಯಳಲ್ಲ ರಾಮಚಂದ್ರ, ಸ್ತ್ರೀವಧೆಯನು ಮಾಡಬಾರದೆಂಬ ಕೃಪಾಳುತ್ವವನ್ನು ಬಿಡು.

ಮುಂದುವರಿಯುವುದು...

# ದಾಖಲೆಗಳು ಸರಿ ಇದೆಯಾ ಅಂತ ಒಮ್ಮೆ ಪರಿಶೀಲಿಸಿಕೊಳ್ಳಿ

## ಆರ್ಥಿಕ ನಷ್ಟವನ್ನು ಸಹ ಅನುಭವಿಸಬಹುದು, ಜಮೀನು ಖರೀದಿಸುವಾಗ 6 ದಾಖಲೆಗಳು ಕಡ್ಡಾಯ

• ಉದಯವಾಹಿನಿ ಬೆಂಗಳೂರು

ನೀವು ಯಾವುದೇ ನಗರದಲ್ಲಿ ಭೂಮಿ ಖರೀದಿಸಲು ತಯಾರಿ ನಡೆಸುತ್ತಿದ್ದರೆ, ನೀವು ಕಾನೂನು ನಿಯಮಗಳು ಮತ್ತು ಮುನ್ನೆಚ್ಚರಿಕೆಗಳನ್ನು ತಿಳಿದಿರಬೇಕು.

ನೀವು ಮಾಹಿತಿಯಿಲ್ಲದೆ ಭೂಮಿಯನ್ನು ಖರೀದಿಸಲು ಪ್ರಯತ್ನಿಸಿದರೆ, ನೀವು ತೊಂದರೆಗೆ ಸಿಲುಕಬಹುದು, ಆರ್ಥಿಕ ನಷ್ಟವನ್ನು ಸಹ ಅನುಭವಿಸಬಹುದು.

ಹೀಗಾಗಿ ಜಮೀನು ಖರೀದಿಸುವಾಗ 6 ದಾಖಲೆಗಳು ಕಡ್ಡಾಯವಾಗಿದೆ.

ಉದಯವಾಹಿನಿ ಚಿತ್ರ

**ಹಕ್ಕುಪತ್ರ ಆಸ್ತಿಯ ಹೆಸರಿನಲ್ಲಿ ನೋಂದಾಯಿಸಿ**

ಯಾವುದೇ ಆಸ್ತಿಯನ್ನು ಖರೀದಿಸುವ ಮೊದಲು, ಅದರ ಹಕ್ಕುಪತ್ರವನ್ನು ನೋಡುವುದು ಮುಖ್ಯ. ಹಕ್ಕುಪತ್ರ ಎಂದರೆ ಅದು ಅಂತಹ ಮತ್ತು ಅಂತಹ ಆಸ್ತಿಯ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿದೆ. ಅವನಿಗೆ ಆಸ್ತಿ ಹೇಗೆ ಸಿಕ್ಕಿತು? ಇದು ಕುಟುಂಬದಿಂದ ಆನುವಂಶಿಕವಾಗಿ ಬಂದಿದೆ, ಅಥವಾ ಯಾರಿಂದಲಾದರೂ ಖರೀದಿಸಲಾಗಿದೆ. ಒಟ್ಟಾರೆಯಾಗಿ, ಶೀರ್ಷಿಕೆ ಒಪ್ಪಂದವು ನೀವು ಯಾರಿಂದ ಆಸ್ತಿಯನ್ನು ಖರೀದಿಸುತ್ತಿದ್ದೀರಿ ಎಂದು ಸೂಚಿಸುತ್ತದೆ. ಅವನು ನಿಜವಾಗಿಯೂ ಆ ಆಸ್ತಿಯನ್ನು ಹೊಂದಿದ್ದಾನೆಯೇ ಅಥವಾ ಇಲ್ಲವೇ ಎಂಬುದು ತಿಳಿಯುತ್ತದೆ.

**ಸಾಲದ ಕ್ಲಿಯರೆನ್ಸ್:** ಯಾವುದೇ ಆಸ್ತಿಯನ್ನು ಖರೀದಿಸುವಲ್ಲಿ ಎರಡನೇ ಪ್ರಮುಖ ದಾಖಲೆಯೆಂದರೆ ಸಾಲದ ಕ್ಲಿಯರೆನ್ಸ್ ನೋಡುವುದು.

ನೀವು ಖರೀದಿಸಲಿರುವ ಆಸ್ತಿಯ ಮೇಲೆ ಯಾವುದೇ ಸಾಲ ಹೋಗುವುದಿಲ್ಲ ಎಂದು ತಿಳಿದುಕೊಳ್ಳುವುದು ಮುಖ್ಯ.. ಒಮ್ಮೆ ನೀವು ಆಸ್ತಿಯನ್ನು ಖರೀದಿಸಿದ ನಂತರ ಮತ್ತು ಸಾಲ ಬಾಕಿ ಇದ್ದರೆ, ಬ್ಯಾಂಕ್ ನಿಮ್ಮ ಆಸ್ತಿಯನ್ನು ವಶಪಡಿಸಿಕೊಳ್ಳಬಹುದು. ನಂತರ ನಿಮಗೆ ಅದರ ಬಗ್ಗೆ ತಿಳಿದಿಲ್ಲ ಎಂದು ನೀವು ಉಲ್ಲೇಖಿಸಲು ಸಾಧ್ಯವಿಲ್ಲ.

**ಎನ್‌ಒಸಿ:** ಭೂಮಿ ಅಥವಾ ಮನೆ ಖರೀದಿಸುವವರಿಗೆ ಮೂರನೇ ಪ್ರಮುಖ ವಿಷಯವೆಂದರೆ ನೋ ಆಬ್ಜೆಕ್ಷನ್ ಸರ್ಟಿಫಿಕೇಟ್ (ಎನ್‌ಒಸಿ) ಬಗ್ಗೆ ಗಮನ ಹರಿಸಬೇಕು. ಆಸ್ತಿಯ ಮಾರಾಟಗಾರರಿಂದ ಎನ್‌ಒಸಿ ನೀಡಬೇಕು. ನೀವು ಖರೀದಿಸುತ್ತಿರುವ ಆಸ್ತಿ ವಿವಾದವಲ್ಲ ಎಂದು ಇದು ತೋರಿಸುತ್ತದೆ. ಯಾರಿಗಾದರೂ ಆಸ್ತಿಯ ಬಗ್ಗೆ ಆಕ್ಷೇಪಣೆ ಇದ್ದರೆ, ಅವರು ಖರೀದಿಯ ಸಮಯದಲ್ಲಿ ಮಾತ್ರ ಅದರ ಬಗ್ಗೆ ಮಾತನಾಡಬಹುದು. ಎನ್‌ಒಸಿ ಇಲ್ಲದೆ ಆಸ್ತಿಯನ್ನು ಖರೀದಿಸಬೇಡಿ. ಮಾರಾಟ ಪತ್ರ ಆಸ್ತಿ ಅಥವಾ ಭೂಮಿ ವಾಸ್ತವವಾಗಿ ನಿಮ್ಮ ಹೆಸರಿನಲ್ಲಿದೆ ಎಂದು ಆಸ್ತಿಯ ಮಾರಾಟ ಮತ್ತು ಮಾಲೀಕತ್ವ/ ಮಾಲೀಕತ್ವವನ್ನು ಈ ಪತ್ರವು ತೋರಿಸುತ್ತದೆ. ಈ ದಾಖಲೆಯನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸಬೇಕು.

ಅಂದರೆ, ಭೂಮಿಯನ್ನು ಖರೀದಿಸುವ ಮೊದಲು ಭೂಮಿಯನ್ನು ಮಾರಾಟ ಮಾಡುವುದು ಅಥವಾ ಮಾರಾಟ ಪತ್ರವನ್ನು ಒತ್ತಾಯಿಸುವುದು.

**ಜಮಾಬಂದಿ ರಸೀದಿ:** ಇದು ಮುನ್ಸಿಪಲ್ ಕಾರ್ಪೊರೇಷನ್ ಅಥವಾ ಬ್ಲಾಕ್ ಮತ್ತು ಗ್ರಾಮ ಪಂಚಾಯಿತಿಯಿಂದ ಪಡೆದ ಭೂಮಿಯ ದಾಖಲೆಯಾಗಿದೆ. ಜಮಾಬಂದಿಯಲ್ಲಿ, ಭೂಮಿಯ ಅಕ್ರಮ ಮತ್ತು ಸ್ಥಿತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಗುತ್ತದೆ.

**ಎಲ್ಲಾ ದಾಖಲೆಗಳ ಫೋಟೋಕಾಪಿ**

**ನೀವು ಭೂಮಿ ಯನ್ನು ಮಾರಾಟ ಮಾಡಲು ನೋಂದಾಯಿಸಿದರೆ, ಆದಾಯ ಪ್ರಮಾಣಪತ್ರ, ಪ್ಯಾನ್ ಕಾರ್ಡ್, ಬ್ಯಾಂಕ್ ಖಾತೆ ಮಾಹಿತಿ, ಆಧಾರ್ ಕಾರ್ಡ್ ಮುಂತಾದ ಎಲ್ಲಾ ದಾಖಲೆಗಳ ಫೋಟೋಕಾಪಿ ಅಗತ್ಯವಿದೆ.**

**ನಗದು ಸಂಖ್ಯೆ ರಸೀದಿ**

**ಭೂಮಿಯನ್ನು ನೋಂದಾಯಿಸಿದ ನಂತರ, ನಗದು ಸಂಖ್ಯೆಯ ರಸೀದಿಯನ್ನು ಸಲ್ಲಿಸಬೇಕು. ಈ ರಸೀದಿಯ ಮೂಲಕ, ಭೂಮಿಯ ಮೌಲ್ಯದ ಮೊತ್ತವನ್ನು ತಿಳಿಯಲಾಗುತ್ತದೆ ಮತ್ತು ಪುರಾವೆಯಾಗಿ ತಿಳಿಯಬಹುದು.**

**ಆಸ್ತಿ ತೆರಿಗೆ:** ನೀವು ಯಾವುದೇ ಭೂಮಿಯನ್ನು ಮಾರಾಟ ಮಾಡಲು ನೋಂದಾಯಿಸಿದರೆ, ಭೂಮಿಯನ್ನು ಆಸ್ತಿ ಮಾಡುವುದು ಅವಶ್ಯಕ. ಅದರಿಂದ ಪ್ರಮಾಣಪತ್ರವನ್ನು ಪಡೆಯಲಾಗುತ್ತದೆ, ಅದು ಭೂಮಿಯ ಮಾಲೀಕ ಎಂಬುದಕ್ಕೆ ಪುರಾವೆಯಾಗಿದೆ.

**ತೆರಿಗೆ ರಸೀದಿ:** ಭೂಮಿ ಖರೀದಿಸುವ ಗ್ರಾಹಕರು ತೆರಿಗೆ ರಸೀದಿಯನ್ನು ಕೇಳುತ್ತಾರೆ. ಈ ದಾಖಲೆಯೊಂದಿಗೆ, ಭೂಮಿಯಲ್ಲಿ ಯಾವುದೇ ರೀತಿಯ ಸಾಲವಿಲ್ಲ ಎಂಬುದಕ್ಕೆ ಪುರಾವೆಯಾಗಿದೆ. ಆದ್ದರಿಂದ, ಭೂಮಿಯನ್ನು ಮಾರಾಟ ಮಾಡಲು ಈ ದಾಖಲೆ ಅಗತ್ಯವಾಗಬಹುದು.

ನಿಮ್ಮ ಯಾವುದೇ ಭೂಮಿಯನ್ನು ಮಾರಾಟ ಮಾಡುವ ಮೊದಲು ಕೆಲವ

# ಇತಿಹಾಸದಲ್ಲಿ ಘತಿಸಿ ಹೋದ ಅದೆಷ್ಟೋ ದಲಿತರ ಆಕ್ರಂದನ

## ● ಶಿವರಾಮ ಕಾರಂತರು ಬರೆದಿರುವ ಚೋಮನ ದುಡಿ ಕಾದಂಬರಿಯು ಈ ಕ್ಷಣ ನನ್ನ ಕಣ್ಣಮುಂದೆ ಬಂದಿತು

• ಉದಯವಾಹಿನಿ, ಸಿಂಧನೂರು

**ನಮ್ಮ ಆಚಾರ ವಿಚಾರ ಗಳಿಗೆ ವಿರೋಧ**

ಯುಗಯುಗಾಂತರದಿಂದಲೂ ಭಾರತ ದೇಶದಲ್ಲಿ ಜಾತಿಯ ಕ್ರೌರ್ಯವು ಮಾನವೀಯ ಮೌಲ್ಯಗಳನ್ನು ಕಿತ್ತುಕೊಂಡು ಮನುಷ್ಯ ಮನುಷ್ಯರ ನಡುವೆ ಮೃಗೀಯ ವರ್ತನೆಯ ಪರಿಣಾಮವಾಗಿ ಸಾಮಾಜಿಕ ವ್ಯವಸ್ಥೆ ಯಲ್ಲಾಗುತ್ತಿರುವ ತಲ್ಲಣಗಳು ಇಂದಿಗೂ ಮನುಷ್ಯ ರೆದೆಯಲ್ಲಿ ಭಯ ಭೀತಿಯನ್ನು ಹುಟ್ಟಿಸುತ್ತಿವೆ.

ಈ ದೇಶದ ಪಾರಂಪರಿಕ ಬಳುವಳಿಯಾಗಿ, ಮೇಲಸ್ತರದ ವೈದಿಕರು, ಬ್ರಾಹ್ಮಣರು, ಮೇಲ್ಜಾತಿ, ಮೇಲ್ವರ್ಗದ ಸವರ್ಣಿಯರು ಆಚರಣೆಯಲ್ಲಿ ಮುಂದುವರಿಸಿಕೊಂಡು ಬಂದಿರುವ ಈ ಜಾತಿಯ ಹಿನ್ನೆಲೆ, ಕರಾಳ ವ್ಯವಸ್ಥೆಯಲ್ಲಿ ಮುಳುಗಿ ಹೋಗಿರುವ ಅದೆಷ್ಟೋ ನಮ್ಮ ಪೂರ್ವಿಕರು, ನನ್ನ ತಂದೆ ತಾಯಂದಿರು, ನನ್ನಕ್ಕ ತಂಗಿಯರು, ನನ್ನಣ್ಣ ತಮ್ಮಂದಿರು ತಮ್ಮ ಜೀವನದ ಪೂರ್ಣ ಭಾಗವನ್ನೇ ಜಾತಿಯ ವ್ಯವಸ್ಥೆಯ ಕ್ರೌರ್ಯದಲ್ಲಿ, ಅವಮಾನದ ಬಂಧ ನದ ಬಂಧಿಖಾನೆಯಲ್ಲಿ, ಮೇಲು-ಕೀಳು ಭೇದ ಭಿನ್ನಗಳಲ್ಲಿ ತಮ್ಮ ಜೀವಗಳನ್ನು ಕೈಯಲ್ಲಿ ಹಿಡಿದು ಬದುಕಿ ಮಣ್ಣಲ್ಲಿ ಮಣ್ಣಾಗಿ ಹೋಗಿರುವ ಗತಕಾಲದ ಘಟನೆಗಳನ್ನು ನಾವಿಂದು ನೆನೆದರೆ ನಮ್ಮ ಕಣ್ಣಲ್ಲಿ ರಕ್ತ ಕಣ್ಣೀರು ಬರದೇ ಇರದು.

ಶಿವರಾಮ ಕಾರಂತರು ಬರೆದಿರುವ ಚೋಮನ ದುಡಿ ಕಾದಂಬರಿಯು ಈ ಕ್ಷಣ ನನ್ನ ಕಣ್ಣಮುಂದೆ ಬಂದಿತು. ದಲಿತರನ್ನು, ಶೋಷಿತರನ್ನು ಮೇಲ್ವರ್ಗದ ಸಮುದಾಯಗಳು ನಡೆಸಿಕೊಳ್ಳುತ್ತಿದ್ದ ಪರಿ ನೆನೆದರೆ ಮಾನವೀಯ ಮನಸ್ಸುಗಳು ಮರುಗದೆ ಇರದು.

ಆ ದಿನಗಳಲ್ಲಿ ಚೋಮ ಎಂಬ ದಲಿತ ಬಡ ಶೋಷಿತ ಸಮುದಾಯದ ವ್ಯಕ್ತಿ ಉಳ್ಳವರ ಭೂಮಿಯಲ್ಲಿ ಬೆಳಗಿನ ಜಾವದಿಂದ ಸಂಜೆಯವರೆಗೂ ದುಡಿದು ತಂದಂತಹ ಬೊಗಸೆ ಅಕ್ಕಿಯಲ್ಲಿ ಗಂಜಿಯನ್ನು ಮಾಡಿ ತನ್ನಿಡೀ ಕುಟುಂಬವನ್ನು ಪೋಷಿಸುತ್ತಿದ್ದ. ತಾನು ಸಾಯುವುದರೊಳಗೆ ಒಂದಿಷ್ಟು ಭೂಮಿಯನ್ನು ಉಳುಮೆ ಮಾಡಿ ತನ್ನ ಮಕ್ಕಳ ಮದುವೆ ಮಾಡಿ ಬದುಕು ಕಟ್ಟಿಕೊಳ್ಳಬೇಕೆಂಬ ಹಂಬಲವನ್ನು ಅಂದಿನ ವ್ಯವಸ್ಥೆಯ ಪ್ರಧಾನರ ಮುಂದೆ ವ್ಯಕ್ತಪಡಿಸಿದರೆ ದಲಿತರು ಭೂಮಿ ಉಳುಮೆ ಮಾಡಲು ಯೋಗ್ಯರಲ್ಲ, ಅನಾಚಾರವಾದೀತು ಇದು ನಮ್ಮ ಆಚಾರ ವಿಚಾರಗಳಿಗೆ ವಿರೋಧವಾದದ್ದು ಎನ್ನುವ ಮೌಢ್ಯವನ್ನು ಬಿತ್ತಿ ಚೋಮನ ಕನಸುಗಳು ಕಮರಿ ಹೋಗುವಂತೆ ಮಾಡಿದ ಉಳ್ಳವರು.

ಚೋಮನು ತನ್ನಿಡಿ ಜೀವಮಾನದುದ್ದಕ್ಕೂ ಜಾತಿ ವ್ಯವಸ್ಥೆಯ ಕ್ರೌರ್ಯದಲ್ಲಿ ಮುಳುಗಿ ಹೋಗಿ, ದುಡಿಯುವ ಕೈಗಳಿಗೆ ಕೆಲಸವಿರದೆ, ತುಂಡು ಭೂಮಿಯು ಸಿಗದೇ, ಪ್ರಾಯಕ್ಕೆ ಬಂದ ಮಕ್ಕಳ ಮದುವೆ ಮಾಡಲು ಚಿಂತಾ ಭ್ರಾಂತನಾಗಿ, ತನ್ನ ದೈವ ಪಂಜುರ್ಲಿಯ ಮೇಲೆ ನಂಬಿಗೆಯನಿಟ್ಟು, ಗುಲಾಮಗಿರಿಯ ವ್ಯವಸ್ಥೆಯನ್ನು ತನ್ನ ಮೇಲೆ ಹೇರಿದರೂ ತನ್ನ ಒಡೆಯನಿಗೆ ವಿಧೇಯನಾಗಿ ಪ್ರಾಮಾಣಿಕ ಕಾರ್ಮಿಕನಾಗಿ, ರೈತನಾಗಿ ಹಗಲಿರುಳು ದುಡಿದು ಶ್ರಮಶಕ್ತಿಯ ಮೇಲೆ ನಂಬಿಕೆಯುಳ್ಳ ಶ್ರಮಿಕನಾದ. ಭೂಮಿಯನ್ನು ಉಳುಮೆ ಮಾಡಲು ಅವಕಾಶ ಸಿಗದೇ ಇದ್ದಾಗ ತನ್ನ ನೋವನ್ನು, ಆಕ್ರಂದನವನ್ನು, ಆಕ್ರೋಶವನ್ನು ಯಾರ ಮೇಲೂ ತೋರಿಸದೇ ಈ ಸಮಾಜದಲ್ಲಿ ಕೆಳಸ್ತರ ಸಮುದಾಯಗಳ ಬದುಕಿನ ಬವಣೆಯನ್ನು ತನ್ನೊಳಗೆ ನೆನೆಯುತ್ತಾ, ತನ್ನಿಡಿ ಜೀವಮಾನದ ವೃತ್ತಾಂತವನ್ನೆಲ್ಲ ಕಣ್ಮುಂದೆ ತಂದುಕೊಳ್ಳುತ್ತಾ, ಬಡತನದ ಭವಣೆಯಲ್ಲಿ ತನ್ನ ಮಕ್ಕಳ ಜೀವಗಳು ಆತನ ಕಣ್ಣಮುಂದೆಯೇ ಕಣ್ಮರೆಯಾದ ಕಹಿ ಘಟನೆಗಳನ್ನು ಸ್ಮರಿಸುತ್ತಾ, ತನ್ನ ಕೈಯಲ್ಲಿದ್ದ ದುಡಿಯನ್ನು ಬಡಿಯುತ್ತಾ, ಕುಣಿಯುತ್ತಾ ಕಣ್ಮುಚ್ಚಿದ ಚೋಮನಂತಹ ಅದೆಷ್ಟೋ ನನ್ನ ಪೂರ್ವಿಕರ ಆರ್ತನಾದಗಳು ಈ ಭೂಮಿಯ ಮಣ್ಣಲ್ಲಿ ಮಣ್ಣಾಗಿ ಹೋಗಿವೆ.

ಹಾಗೆಯೇ ಕಂಬಾಲಪಲ್ಲಿಯಲ್ಲಿ ದಲಿತರ ದಹನಗಳು, ಹಂಗರಹಳ್ಳಿ, ಬೆಲ್ಚಿಪಿಬ್ರಿ, ಕಾರಂಚೇಡು ಚುಂಡೂರು ದಲಿತರ ಮೇಲೆ ನಡೆದ ಅಮಾನವೀಯ ಕೊಲೆಗಳು, ಹಲ್ಲೆ ದೌರ್ಜನ್ಯಗಳು ಮತ್ತು ಕೋಲಾರ ಜಿಲ್ಲೆಯ ದಾಸನಪುರದಲ್ಲಿ ಚಿಕ್ಕ ತಿಮ್ಮಯ್ಯನೆಂಬ ನನ್ನಣ್ಣ ದಲಿತನನ್ನು ದರದರನೇ ಎಳೆದು ತಂದು ಗುಡಿಸಲಲ್ಲಿ ಗುಡ್ಡೆ ಹಾಕಿ ಸುಟ್ಟು ಬೂದಿ ಮಾಡಿದ ಕಹಿ ಘಟನೆಗಳನ್ನು ನೆನೆದರೆ ನಮ್ಮ ರಕ್ತ ಕುದಿಯುತ್ತೆತೆ.

ಹೀಗೆ ಒಂದಲ್ಲ ಎರಡಲ್ಲ ಶತಶತಮಾನಗಳಿಂದಲೂ ಶೋಷಿತ ಸಮುದಾಯಗಳ ಮೇಲೆ, ದಲಿತ ದಮನಿತ ಅಮಾಯಕರ ಮೇಲೆ ಬಲಿತಂತ ಸಮುದಾಯಗಳು, ಮೇಲಸ್ತರದ, ಮೇಲ್ವರ್ಗದ ಜಾತಿವಾದಿ ಪಟ್ಟಭದ್ರ ಹಿತಾಸಕ್ತಿಗಳು ಈ ಅಬಲೆಯ ಸಮುದಾಯಗಳ ಮೇಲೆ ನಿರಂತರವಾಗಿ ಅಸ್ಪೃಶ್ಯತೆ, ಅಸಮಾನತೆ, ಅನಾಗರಿಕತೆಯಂತಹ ದೌರ್ಜನ್ಯ, ದರ್ಪ, ದಬ್ಬಾಳಿಕೆಯಂತಹ ಅಮಾನವೀಯ ಕ್ರೌರ್ಯವನ್ನು ಹೇರುತ್ತಾ ಬಂದಿದ್ದರೂ ಒಡಲೊಳಗಿನ ನೋವನ್ನು ಮುಗ್ಧ ಸಮುದಾಯಗಳು ತಾಳುತ್ತಾ ಬಂದಿವೆ, ತಾಳಿ ತಾಳಿ ಒಮ್ಮೆ ಚೇಳಾಗಿ ಕುಟುಕುವರು.

-ಮೌನೇಶ ಜಾಲವಾಡಗಿ, ಜಿಲ್ಲಾ ಸಂಚಾಲಕರು, ದಲಿತ ವಿದ್ಯಾರ್ಥಿ ಪರಿಷತ್ ರಾಯಚೂರು

## ಹಾಡಹಗಲೇ ಮಕ್ಕಳ ಕಿಡ್ನಾಪ್ ಕೇಸ್‌ಗೆ ಬಿಗ್ ಟ್ವಿಸ್ಟ್

• ಉದಯವಾಹಿನಿ, ಬೆಳಗಾವಿ

ಬೆಳಗಾವಿ ಜಿಲ್ಲೆಯಲ್ಲಿ ಹಾಡಹಗಲೇ ಮನೆಗೆ ನುಗ್ಗಿ ಇಬ್ಬರು ಮಕ್ಕಳನ್ನು ಅಪಹರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಥಣಿ ಠಾಣೆ ಪೊಲೀಸರು ಇದೀಗ ಇಬ್ಬರು ಮಕ್ಕಳನ್ನು ರಕ್ಷಿಸಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಬಿಗ್ ಟ್ವಿಸ್ಟ್ ಸಿಕ್ಕಿದೆ. ಹೌದು, ಆರೋಪಿಗಳ ಬಳಿ ಮಕ್ಕಳ ತಂದೆ ವಿಜಯ ದೇಸಾಯಿ ಹಣ ಡಬಲ್ ಮಾಡಿಕೊಡುವುದಾಗಿ ಕೋಟ್ಯಂತರ ರೂಪಾಯಿ ಪಡೆದುಕೊಂಡಿದ್ದ. ಆರೋಪಿಗಳಿಗೆ ಹಣ ವಾಪಸ್ ಕೊಡದಿದ್ದಕ್ಕೆ ಮನೆಗೆ ನುಗ್ಗಿ ವಿಜಯ್ ದೇಸಾಯಿ ಇಬ್ಬರು ಮಕ್ಕಳಾದ ಸ್ವಸ್ತಿ ದೇಸಾಯಿ (4), ವ್ಯೋಮ ದೇಸಾಯಿ (3)ರನ್ನು ಅಪಹರಣ ಮಾಡಲಾಗಿತ್ತು.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೋಹಳ್ಳಿ ಗ್ರಾಮದ ಬಳಿ ಘಟನೆ ನಡೆದಿದೆ. ಹಾಡಹಗಲೇ ಇಬ್ಬರು ಮಕ್ಕಳನ್ನು ಅಪಹರಿಸಿದ್ದ ಆರೋಪಿಗಳ ಮೇಲೆ ಪೊಲೀಸರು ಗುಂಡಿನ ದಾಳಿ ನಡೆಸಿದ್ದು, ಈ ವೇಳೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಮಹಾರಾಷ್ಟ್ರದ ಕೊಲ್ಲಾಪುರ ಮೂಲದ ಸಾಂಬಾ ಕಾಂಬಳೆ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ಮೂಲದ ರವಿಕಿರಣ್ ಕಮಲಾಕರ್, ಬಿಹಾರ ಮೂಲದ ಶಾರುಖ್ ಶೇಕ್ ಬಂಧಿತ ಆರೋಪಿಗಳು.

ಬಂಧನದ ವೇಳೆ ಪಿಎಸ್‌ಐ ಮತ್ತು ಸಿಬ್ಬಂದಿ ಮೇಲೆ ಆರೋಪಿ ಸಾಂಬಾ ರಾವ್ ಕಲ್ಲು ತೂರಿದ್ದಾನೆ. ಈ ವೇಳೆ ಆರೋಪಿ ಕಾಲಿಗೆ ಫೈರಿಂಗ್ ಮಾಡಲಾಗಿದೆ. ಆತ್ಮರಕ್ಷಣೆಗಾಗಿ ಸಾಂಬಾ ಮೇಲೆ ಪೊಲೀಸರು ಫೈರಿಂಗ್ ಮಾಡಿದ್ದಾರೆ. ಗಾಯಾಳು ಪೊಲೀಸರು ಮತ್ತು ಆರೋಪಿಯನ್ನು ಅಥಣಿ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ. ವಿಜಯ್ ದೇಸಾಯಿ ಅಥಣಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು ಇದೀಗ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಬೀಜೋಪಚಾರದಿಂದ ಕೊಯ್ಲಿನವರಿಗೆ ತಾಂತ್ರಿಕ ಪದ್ಧತಿ ಅಳವಡಿಸಿ

• ಉದಯವಾಹಿನಿ, ಸಿಂಧನೂರು

ಜೋಳದ ಬೆಳೆಯಲ್ಲಿ ಬೀಜೋಪಚಾರದಿಂದ ಹಿಡಿದು ಕೊಯ್ಲಿನವರಿಗೆ ತಾಂತ್ರಿಕ ಪದ್ಧತಿಗಳನ್ನು ಅಳವಡಿಸಿಕೊಂಡಾಗ ಉತ್ಪಾದನೆ ಖರ್ಚು ಕಡಿಮೆಯಾಗಿ ಅಧಿಕ ಇಳುವರಿಯನ್ನು ಪಡೆಯಬಹುದೆಂದು ಶ್ರೀಮತಿ ರೇಣುಕಾ ಬಿರಾದಾರ್ ಕೃಷಿ ವಿಸ್ತರಣಾ ಕೇಂದ್ರ ಲಿಂಗಸೂಗೂರು ಇವರು ಹೇಳಿದರು

ನಯಿಂ ಹುಸೇನ್ ಉಪ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಲಿಂಗಸೂಗೂರು ಇವರು ಮಾತನಾಡಿ ಈ ಭಾಗದಲ್ಲಿ ಕಳೆದ ಹಲವಾರು ವರ್ಷದಿಂದ ಜೋಳದ ಬೆಳೆಯನ್ನು ಮುಖ್ಯ ಬೆಳೆಯನ್ನಾಗಿ ಬೆಳೆಯುತ್ತಿದ್ದು ರೈತರು ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಅಧಿಕ ಇಳುವರಿಯನ್ನು ಬೆಳೆದು ಹೆಚ್ಚಿನ ಆದಾಯವನ್ನು ಪಡೆಯಬೇಕೆಂದು ತಿಳಿಸಿದರು

ಆರವಿಂದ ರಾಥೋಡ್ ಕೃಷಿ ವಿಸ್ತರಣಾ

ಉದಯವಾಹಿನಿ ಚಿತ್ರ

ಕೇಂದ್ರ ಲಿಂಗಸೂಗೂರು ಮಾತನಾಡಿ ಹತ್ತಿ, ತೊಗರಿ ಬೆಳೆಯಲ್ಲಿ ಸಮಗ್ರ ರೋಗ, ಕೀಟ ನಿರ್ವಹಣೆ ಬಗ್ಗೆ ತಿಳಿಸಿದರು. ಸಿಂಧನೂರಿನ ಸಹಾಯಕ ಕೃಷಿ ನಿರ್ದೇಶಕರಾದ ಶ ನಜೀರ್ ಅಹ್ಮದ್ ಅವರು ಮಾತನಾಡಿ ಜೋಳದ ಬೆಳೆಯಲ್ಲಿ ಸೈನಿಕ ಹುಳುವಿನ ನಿರ್ವಹಣೆಯನ್ನು ಆರಂಭಿಕ ಹಂತದಲ್ಲಿ ತಾಂತ್ರಿಕ ಪದ್ಧತಿಯನ್ನು ಅಳವಡಿಸಿಕೊಂಡು ರಸ ಗೊಬ್ಬರಗಳನ್ನು ಕಡಿಮೆ ಬಳಸಿ ಸಕಾಲಕ್ಕೆ ಕೀಟ ನಾಶಕಗಳನ್ನು ಸಿಂಪಡಿಸಿದರೆ ರೋಗ, ಕೀಟಗಳನ್ನು ಹತೋಟಿಯಲ್ಲಿಡಬಹು ದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಸಾವಿತ್ರಿ ಪಾಟೀಲ್ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ವಲ್ಕಂದಿನ್ನಿ ಆತ್ಮ ಯೋಜನೆಯ ಗುರು ಸಿದ್ದಲಿಂಗಯ್ಯ ಹಾಗೂ ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಗಳು, ರಾಗಲಪರ್ವಿ ಗ್ರಾಮದ ಗ್ರಾಮದ ರೈತರು ಭಾಗವಹಿಸಿದ್ದರು.

**ಕೀಟ, ರೋಗದ ಕುರಿತು ಜಾಗೃತಿ**

ತಾಲ್ಲೂಕಿನ ವಲ್ಕಂದಿನ್ನಿ ಹೋಬಳಿಯ ರಾಗಲಪರ್ವಿ ಗ್ರಾಮದ ಶ್ರೀ ವೆಂಕಟರಾಯ ಇವರ ಹೊಲದಲ್ಲಿ ಕೃಷಿ ಇಲಾಖೆಯ ಆತ್ಮ ಯೋಜನೆಯಡಿ ಕ್ಷೇತ್ರ ಪಾಠಶಾಲೆಯಲ್ಲಿ ಜೋಳದ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗದ ಕುರಿತು ಜಾಗೃತಿಯನ್ನು ಹಮ್ಮಿಕೊಳ್ಳಲಾಗಿತ್ತು.

## ಕಾಂಗ್ರೇಸ್ ದುರಾಡಳಿತದಿಂದ ಜನರನ್ನು ರಕ್ಷಿಸಲು ಬಿಜೆಪಿಯನ್ನು ಗೆಲ್ಲಿಸಿ

• ಉದಯವಾಹಿನಿ, ಹಾವೇರಿ

ಕಾಂಗ್ರೇಸ್‌ನ ದುರಾಡಳಿತದಿಂದ ನಮ್ಮ ಜನರನ್ನು ರಕ್ಷಣೆ ಮಾಡಲು ಈ ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳಿಂದ ಭರತ್ ಬೊಮ್ಮಾಯಿಯವರನ್ನು ಗೆಲ್ಲಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಶಿಗ್ಗಾಂವಿ ಜನರಲ್ಲಿ ಮನವಿ ಮಾಡಿದ್ದಾರೆ.

ಶಿಗ್ಗಾಂವಿಯಲ್ಲಿ ಶುಕ್ರವಾರ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿಯವರ ನಾಮಪತ್ರ ಸಲ್ಲಿಕೆಗೂ ಮುನ್ನ ಶಿಗ್ಗಾವಿ ಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸಲಾಯಿತು.

ಈ ವೇಳೆ ಮಾತನಾಡಿದ ಬಸವರಾಜ ಬೊಮ್ಮಾಯಿ, ಭರತ್ ಬೊಮ್ಮಾಯಿವರಿಗೆ ಇಷ್ಟು ದೊಡ್ಡ ಶಕ್ತಿ ನೀಡಿದ್ದೀರಿ ನಿಮ್ಮ ಅಭೂತಪೂರ್ವ ಬೆಂಬಲಕ್ಕೆ ನಾನು ಚಿರಋಣಿಯಾಗಿದ್ದೇನೆ ಎಂದರು. ಮಾಜಿ ಮುಖ್ಯಮಂತ್ರಿ, ನಮ್ಮೆಲ್ಲರ ನೆಚ್ಚಿನ ನಾಯಕರಾದ ಬಿ.ಎಸ್. ಯಡಿಯೂರಪ್ಪ ಅವರು ನನ್ನ ಚುನಾವಣೆಗೆ ನಾಲ್ಕು ಬಾರಿ ಶಿಗ್ಗಾಂವಿಗೆ ಬಂದಿದ್ದಾರೆ. ಅವರು ಶಿಗ್ಗಾಂವಿಗೆ ಕಾಲಿಟ್ಟಾಗಲೆಲ್ಲಾ ಬಿಜೆಪಿ ಇಲ್ಲಿಗೆದ್ದಿದೆ. ಯಡಿಯೂರಪ್ಪ ಅವರ ಆಶೀರ್ವಾದ ಎಷ್ಟಿದೆ ಎಂದರೆ ನನಗಿಂತ ಹೆಚ್ಚಿನ ಅಂತರದಿಂದ ಭರತ್ ಬೊಮ್ಮಾಯಿಯನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಭರತ್ ಬೊಮ್ಮಾಯಿ ನಮ್ಮ ಕಾಲದ ಅಭಿವೃದ್ಧಿ ಮುಂದುವರೆಯಬೇಕು. ರೈತರು, ಹಿಂದುಳಿದವರು, ಮಹಿಳೆಯರು, ಯುವಕರ ಸಮಗ್ರ ಅಭಿವೃದ್ಧಿ ಮಾಡಬೇಕೆಂದು ಭರತ್‌ಗೆ ಆದೇಶ ಮಾಡುತ್ತೇನೆ. ನಾನು ನಿಮ್ಮ ಜೊತೆಗೆ ಇರುತ್ತೇನೆ. ಚುನಾವಣೆಯಲ್ಲಿ ಯಾರೂ ಮೈಮರೆಯಬಾರದು, ಹತ್ತು ದಿನ ಎಲ್ಲರೂ ಬೂತ್ ಮಟ್ಟದಲ್ಲಿ ಸಕ್ರೀಯರಾಗಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಸಿ.ಸಿ. ಪಾಟೀಲ್, ಮುರುಗೇಶ ನಿರಾಣಿ, ಬೈರತಿ ಬಸವರಾಜ್, ಶಂಕರ ಪಾಟೀಲ್ ಮುನೇನಕೊಪ್ಪ, ವಿಧಾನ ಸಭೆ ವಿರೋಧ ಪಕ್ಷದ ಉಪ ನಾಯಕ ಆರವಿಂದ ಬೆಲ್ಲದ್, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಅನೇಕ ನಾಯಕರು ಪಾಲ್ಗೊಂಡಿದ್ದರು.

**ಬಿ. ಎಸ್. ಯಡಿಯೂರಪ್ಪ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಬಿಜೆಪಿ ಕಟ್ಟಿದ್ದಾರೆ ಅವರ ಶ್ರಮದಿಂದ ಶಿಗ್ಗಾಂವಿಯಲ್ಲಿ ಐಟಿಐ, ಮೆಡಿಕಲ್ ಕಾಲೇಜು, ಆಸ್ಪತ್ರೆ ಬಂದಿದೆ. ಕ್ಷೇತ್ರದಲ್ಲಿ ಗಾರ್ಮೆಂಟ್ ಕಾರ್ಖಾನೆಯಿಂದ ಸುಮಾರು ಐದು ಸಾವಿರ ಹೆಣ್ಣು ಮಕ್ಕಳು ಉದ್ಯೋಗ ಪಡೆದಿದ್ದಾರೆ. ಕಾಂಗ್ರೇಸ್‌ನ ದುರಾಡಳಿತದಿಂದ ನಮ್ಮ ಜನರನ್ನು ರಕ್ಷಣೆ ಮಾಡಬೇಕು. ಅದಕ್ಕಾಗಿ ಭರತ್ ಬೊಮ್ಮಾಯಿಯನ್ನು ಗೆಲ್ಲಿಸುವಂತೆ ಮನವಿ ಮಾಡಿದರು.**

## ಆರ್‌ಎಸ್‌ಎಸ್ ಭವ್ಯ ಪಥ ಸಂಚಲನ

• ಉದಯವಾಹಿನಿ, ಮುದ್ದೇಬಿಹಾಳ

ವಿಜಯದಶಮಿ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮುದ್ದೇಬಿಹಾಳ ನಗರ ಘಟಕದಿಂದ ಶನಿವಾರ ಭವ್ಯ ಪಥ ಸಂಚಲನ ನಡೆಯಲಿದೆ. ಪಥಸಂಚಲನ ಮಾರ್ಗ; ಮಧ್ಯಾಹ್ನ 3 ಗಂಟೆಗೆ ನಗರದ ಹುಡ್ಕೋ ಬಡಾವಣೆಯ ಗವಿಸಿದ್ದೇಶ್ವರ ವೇದಿಕೆ ಮೈದಾನ ದಿಂದ ಪ್ರಾರಂಭವಾಗುವ ಭವ್ಯ ಪಥ ಸಂಚಲನ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ವೃತ್ತದ ಮೂಲಕ ಸ್ಟೇಟ್ ಬ್ಯಾಂಕ್ ಮುಖ್ಯ ರಸ್ತೆ ಮುಖಾಂತರ ಕೆ.ಎಸ್.ಆರ್.ಟಿ ಮುಖ್ಯ ರಸ್ತೆ ಮಾರ್ಗವಾಗಿ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಸಂತ ಕನಕದಾಸ ವೃತ್ತ, ವಾಲ್ಮೀಕಿ ವೃತ್ತ, ಶಾರದಾ ದೇವಸ್ಥಾನ, ಲಕ್ಷ್ಮೀ ವೆಂಕಟೇಶ್ವರ ಗುಡಿ, ಛತ್ರಪತಿ ಶಿವಾಜಿ ವೃತ್ತ, ಸಿದ್ರಾಮೇಶ್ವರ ವೃತ್ತ, ನೇತಾಜಿ ಗಲ್ಲಿ, ಕುಂಬಾರಗಲ್ಲಿ, ದ್ಯಾಮವ್ವನ ಗುಡಿ, ಕಿಲ್ಲಾ ಹೊಸಮಠ(ಮರಳಿ ಬರುವುದು) ಸರಾಫ ಬಜಾರ, ಶ್ರೀದುರ್ಗಾದೇವಿ ಗುಡಿ(ದ್ಯಾಮವ್ವನ ಕಟ್ಟಿ), ಮುಖ್ಯ ಬಜಾರ, ಮಾರ್ಗವಾಗಿ ಬಸವೇಶ್ವರ ವೃತ್ತ ತಲುಪಿ ಸಂಗೋಳ್ಳಿ ರಾಯಣ್ಣ ವೃತ್ತ, ಡಾ ಬಿ ಆರ್ ಅಂಬೇಡ್ಕರ ವೃತ್ತ, ಸಂಚರಿಸಿ ವ್ಹಿ.ಬಿ.ಸಿ ಚಿನಿವಾರ ಮೈ ದಾನ ತಲುಪುವುದು ಬಳಿಕ 5-15 ಕ್ಕೆ ಸಾರ್ವಜನಿಕ ಸಮಾರಂಭ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ವಕ್ತಾರರಾದ ಅರವಿಂದರಾವ ದೇಶಪಾಂಡೆ ಪ್ರಾಂತ ಕಾರ್ಯಕಾರಣಿ ಸದಸ್ಯರು ಕರ್ನಾಟಕ ಉತ್ತರ ಸ್ವಯಂಸೇವಕರನ್ನು ಉದ್ದೇಶಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪ್ರಾರಂಭವಾಗಿ 99 ವರ್ಷಕ್ಕೆ ಪದಾರ್ಪಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ವಿಜಯದಶಮಿ ವಾರ್ಷಿ ಕೋತ್ಸವದ ಭವ್ಯ ಪಥಸಂಚಲನ ಜರುಗಲಿದೆ.

ಪಥ ಸಂಕಲನದಲ್ಲಿ ಸುಮಾರು 200 ಕ್ಕೂ ಅಧಿಕ ರಾಷ್ಟ್ರೀಯ ಸ್ವಯಂ ಸೇವಕರು ಗಣವೇಶಧಾರಿಗಳಾಗಿ ಭವ್ಯ ಪಥ ಸಂಚಲದಲ್ಲಿ ಭಾಗವಹಿಸಲಿದ್ದಾರೆ.

ಉದಯವಾಹಿನಿ ಚಿತ್ರ

## ನಿರಂತರ ಮಳೆ, ನೀರುಪಾಲಾದ ಈರುಳ್ಳಿ

• ಉದಯವಾಹಿನಿ, ಕುಷ್ಟಗಿ

ಪರಿಶ್ರಮದಿಂದ ಈರುಳ್ಳಿ ಬೆಳೆ ಚೆನ್ನಾಗಿ ಬೆಳೆದಿತ್ತು, ಇನ್ನೇನು ಕೆಲ ದಿನಗಳಲ್ಲಿ ಮಾರುಕಟ್ಟೆಗೆ ಹೋಗಬೇಕೆನ್ನುವಷ್

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು.

**ವೃಷಭ** ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು, ಆದರೆ ನೀವು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ.

**ಮಿಥುನ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ಕರ್ಕಾಟಕ** ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ.

**ಸಿಂಹ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

**ಕನ್ಯಾ** ಮದ್ಯಪಾನ ಮಾಡಿದಲ್ಲಿ ಅದು ನಿಮ್ಮ ನಿದ್ರೆಗೆ ಭಂಗ ತಂದು ಆಳವಾದ ವಿಶ್ರಾಂತಿ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದಾದ್ದರಿಂದ ಹಾಗೆ ಮಾಡಬೇಡಿ. ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ.

**ತುಲಾ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

**ವೃಶ್ಚಿಕ** ನೀವು ಧೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ. ಅವರು ನಿಮ್ಮ ಮೇಲೆ ಒತ್ತಡ ಹಾಕಬಹುದು.

**ಧನಸ್ಸು** ಯಾವುದೇ ಕಾರಣವಿಲ್ಲದೆ ಕೆಲವು ಜನರೊಂದಿಗೆ ಗೊಂದಲ ಮಾಡಬಹುದು. ಹಾಗೆ ಮಾಡುವುದರಿಂದ ನಿಮ್ಮ ಮನಸ್ಥಿತಿ ಹಾಳಾಗುತ್ತದೆ ಮತ್ತು ಅದು ನಿಮ್ಮ ಅಮೂಲ್ಯ ಸಮಯವನ್ನು ಸಹ ವ್ಯರ್ಥ ಮಾಡುತ್ತದೆ.

**ಮಕರ** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ.

**ಕುಂಭ** ಮಕ್ಕಳ ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಃಶ್ಚೇತನಗೊಳಿಸುತ್ತದೆ.

**ಮೀನ** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ.

# ಹೆದ್ದಾರಿಯಲ್ಲಿ ಬ್ಯಾರಿಕೇಡ್: ದಾಖಲೆ ಪರಿಶೀಲನೆ ನೆಪದಲ್ಲಿ ನಿಲ್ಲದ ಕಿರಿಕಿರಿ

## ● ವಾಹನಗಳ ಸುಗಮ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎನ್ನುವುದು ಸವಾರರ ಹಾಗೂ ಸಾರ್ವಜನಿಕರ ಆರೋಪ

• ಉದಯವಾಹಿನಿ, ಹುಬ್ಬಳ್ಳಿ

ದಾಖಲೆಗಳ ಪರಿಶೀಲನೆ ನೆಪದಲ್ಲಿ ಪೊಲೀಸರು ಅನಗತ್ಯವಾಗಿ ವಾಹನ ಸವಾರರನ್ನು ತಡೆದು ತಪಾಸಣೆ ನಡೆಸಬಾರದು. ಸಂಚಾರ ನಿಯಮ ಉಲ್ಲಂಘಿಸಿದ ಸಂದರ್ಭದಲ್ಲಿ ಮಾತ್ರ ತಡೆದು ದಂಡ ವಿಧಿಸಬೇಕು ಎಂದು ಪೊಲೀಸ್ ಇಲಾಖೆಯ ಸ್ಪಷ್ಟ ನಿರ್ದೇಶನವಿದ್ದರೂ, ನಗರ ಸೇರಿದಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅವ್ಯಾಹತವಾಗಿ ವಾಹನಗಳನ್ನು ತಡೆದು ತಪಾಸಣೆ ನಡೆಸಲಾಗುತ್ತಿದೆ. ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪೊಲೀಸರು ನಿಯಮ ಮೀರಿ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಿರುವುದು ಸವಾರರಿಗೆ ಕಿರಿಕಿಯಾಗುತ್ತಿದೆಯಲ್ಲದೆ, ಅಪಘಾತಗಳಿಗೂ ಕಾರಣವಾಗುತ್ತಿದೆ.

ಹುಬ್ಬಳ್ಳಿ ಕಲಘಟಗಿ ಮಾರ್ಗದ ಚಳಮಟ್ಟಿ, ಬೂದನಗುಡ್ಡ, ಮಿಶ್ರಿಕೋಟೆ ಕ್ರಾಸ್, ಹುಬ್ಬಳ್ಳಿಯ ಗಬ್ಬೂರು ಬೈಪಾಸ್, ಹುಬ್ಬಳ್ಳಿ-ತಡಸ ಕ್ರಾಸ್, ಹುಬ್ಬಳ್ಳಿ-ಕುಸಗಲ್ ರಸ್ತೆ, ಹುಬ್ಬಳ್ಳಿ-ಗದಗ ರಸ್ತೆ, ಧಾರವಾಡ-ಬೆಳಗಾವಿ ರಸ್ತೆ, ಧಾರವಾಡ-ಸವದತ್ತಿ ರಸ್ತೆ, ಧಾರವಾಡ-ಹಳಿಯಾಳ ಹಾಗೂ ಧಾರವಾಡ ಕಲಘಟಗಿ ಸೇರಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲೂ ಅನಗತ್ಯವಾಗಿ ನಿರಂತರ ವಾಹನ ತಪಾಸಣೆ ನಡೆಯುತ್ತದೆ. ಇದರಿಂದ ವಾಹನಗಳ ಸುಗಮ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎನ್ನುವುದು ಸವಾರರ ಹಾಗೂ ಸಾರ್ವಜನಿಕರ ಆರೋಪವಾಗಿದೆ.

**ಸುಗಮ ಸಂಚಾರಕ್ಕೆ ಅಡಚಣೆ**

ಧಾರವಾಡ ಮತ್ತು ಹುಬ್ಬಳ್ಳಿ ಗ್ರಾಮೀಣ ಠಾಣೆ ಹಾಗೂ ಕಲಘಟಗಿ ಠಾಣೆ ಪೊಲೀಸರು ಹೆಚ್ಚಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ವಾಹನಗಳ ತಪಾಸಣೆ ನಡೆಸುತ್ತಾರೆ. ತಿಂಗಳ ಕೊನೆಯ ವಾರದಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ಪೊಲೀಸರು ಅಲ್ಲಿಯೇ ಮೊಕ್ಕಾಂ ಹೂಡುತ್ತಾರೆ. ಹೆದ್ದಾರಿಯಲ್ಲಿ ವಾಹನಗಳನ್ನು ತಡೆದು ತಪಾಸಣೆ ನಡೆಸುವುದು ಸುಗಮ ಸಂಚಾರಕ್ಕೆ ಅಡಚಣೆ ಹಾಗೂ ಅಪಘಾತಕ್ಕೆ ಕಾರಣವಾಗಬಹುದು ಎಂದು ವರ್ಷದ ಹಿಂದೆ ಪೊಲೀಸ್ ಮಹಾನಿರ್ದೇಶಕರಾಗಿದ್ದ ಪ್ರವೀಣ್ ಸೂದ್ ಅವರು ನಡುರಸ್ತೆಯಲ್ಲಿ ಹಾಗೂ ಅನಗತ್ಯವಾಗಿ ವಾಹನ ತಪಾಸಣೆ ನಡೆಸಬಾರದು' ಎಂದು ಆದೇಶ ಹೊರಡಿಸಿದ್ದರು. ಆದರೆ, ಅದು ಇಲ್ಲಿ ಪಾಲನೆಯಾಗುತ್ತಿಲ್ಲ.

ಉದಯವಾಹಿನಿ ಚಿತ್ರ

'ಹುಬ್ಬಳ್ಳಿ ಕಾರವಾರ ರಸ್ತೆಯ ಚಳಮಟ್ಟಿ ಕ್ರಾಸ್, ತಡಸ್ ಕ್ರಾಸ್‌ನ ಗಾಯತ್ರಿ ತಪೋವನ, ಅಂಚಟಗೇರಿ ಗೋಪಾಳ ಭಾಗದ ಹೆದ್ದಾರಿಯಲ್ಲಿ ಹುಬ್ಬಳ್ಳಿ ಗ್ರಾಮೀಣ ಹಾಗೂ ಕಲಘಟಗಿ ಠಾಣೆ ಪೊಲೀಸರು ಬೆಳಿಗ್ಗೆಯಿಂದ ಸಂಜೆವರೆಗೂ ಬ್ಯಾರಿಕೇಡ್ ಹಾಕಿ ಕಾರ್ಯಾಚರಣೆ ನಡೆಸುತ್ತಾರೆ. ಹೊರ ರಾಜ್ಯದ ಲಾರಿಗಳು ಹಾಗೂ ಬೇರೆ ಜಿಲ್ಲೆಗಳ ಪಾಸಿಂಗ್ ಇರುವ ವಾಹನಗಳನ್ನು ರಸ್ತೆ ಮಧ್ಯೆಯೇ ತಡೆದು ನಿಲ್ಲಿಸುತ್ತಾರೆ. ಆ ಸಂದರ್ಭದ ಹೆದ್ದಾರಿಯ ಎರಡೂ ಕಡೆ, ಲಾರಿ, ಬಸ್, ಟ್ಯಾಂಕರ್‌ಗಳು ಸಾಲಾಗಿ ನಿಂತು ಸಂಚಾರ ದಟ್ಟಣೆಗೆ ಕಾರಣವಾಗುತ್ತದೆ' ಎಂದು ಚಳಮಟ್ಟಿಯ ಗ್ರಾಮಸ್ಥ ಈರಣ್ಣ ದಪ್ಪೇದಾರ ಹೇಳುತ್ತಾರೆ. ಹೆದ್ದಾರಿಯಲ್ಲಿ ಪೊಲೀಸರು ವಾಹನ ತಪಾಸಣೆ ಮಾಡುವುದರಿಂದ, ಕೆಲವು ದ್ವಿಚಕ್ರ ವಾಹನ ಸವಾರರು ದೂರದಲ್ಲಿ ಪೊಲೀಸರನ್ನು ಕಂಡ ತಕ್ಷಣ ಅಲ್ಲಿಯೇ ಬೈಕ್‌ನ್ನು ತಿರುಗಿಸಲು ಯತ್ನಿಸುತ್ತಾರೆ. ವಿಪರೀತ ವಾಹನಗಳ ಸಂಚಾರ ಇರುವುದರಿಂದ ಅಪಾಯವು ಎದುರಾಗಬಹುದಾದ ಸಾಧ್ಯತೆಯಿದೆ ಎನ್ನುವುದು ಸಾರ್ವಜನಿಕರ ಅಳಲು.

### ನಡುರಸ್ತೆಯಲ್ಲಿ ಹಾಗೂ ಅನಗತ್ಯವಾಗಿ ವಾಹನ ತಪಾಸಣೆ

ವಾಹನ ತಪಾಸಣೆ ಸಂದರ್ಭ ಸಿಬ್ಬಂದಿ ಬಾಡಿ ವಾರ್ನ್ ಕ್ಯಾಮೆರಾ ಕಡ್ಡಾಯವಾಗಿ ಅಳವಡಿಸಿಕೊಂಡಿರಬೇಕು. ಸಂಚಾರ ನಿಯಮ ಉಲ್ಲಂಘಿಸಿದ್ದು ಕಂಡು ಬಂದರೆ ವಾಹನ ತಡೆದು ದಾಖಲೆ ಪರಿಶೀಲನೆ ಮಾಡಬಹುದು. ಕಳವು ಮಾಡಿದ ವಾಹನ ಎಂದು ತಿಳಿದು ಬಂದರೆ ತಡೆದು ವಶಕ್ಕೆ ಪಡೆಯಬಹುದು. ರಾತ್ರಿ ವೇಳೆ ಮದ್ಯ ಸೇವನೆ ಮಾಡಿ ವಾಹನ ಚಲಾಯಿಸುವವರನ್ನು ತಪಾಸಣೆ ಮಾಡಬಹುದು. ಅದು ಸಂಪೂರ್ಣ ವಿಡಿಯೋ ಚಿತ್ರೀಕರಣವಾಗಬೇಕು. ಆದರೆ, ದಾಖಲೆಗಳನ್ನು ಪರಿಶೀಲನೆ ಮಾಡುವ ನೆಪದಲ್ಲಿ ವಾಹನಗಳನ್ನು ತಡೆಯಬಾರದು. ನಡುರಸ್ತೆಯಲ್ಲಿ ವಾಹನಗಳ ತಪಾಸಣೆ ನಡೆಸಬಾರದು.

ಗದರಿಸಿ ದಂಡ ಪಾವತಿಸಿಕೊಳ್ಳುತ್ತಾರೆ' 'ಹೆದ್ದಾರಿಯ ಅಕ್ಕಪಕ್ಕ ನೂರಾರು ಹಳ್ಳಿಗಳು ಇದ್ದು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಬೇಕೆಂದರೆ ಹೆದ್ದಾರಿಯನ್ನೇ ಆಶ್ರಯಿಸಬೇಕಿದೆ. ಹೆಲ್ಮೆಟ್ ಧರಿಸಿ ವಾಹನಗಳ ಕಾಗದ ಪತ್ರಗಳನ್ನು ಇಟ್ಟುಕೊಂಡಿರುತ್ತೇವೆ. ಆದರೂ ಪೊಲೀಸರು ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಾರೆ. ಸಂಚಾರ ನಿಯಮ ಉಲ್ಲಂಘಿಸಿರುವುದು ಕಂಡು ಬಂದರೆ ಮಾತ್ರ ವಾಹನ ತಪಾಸಣೆ ಮಾಡಬೇಕೆನ್ನುವ ನಿಯಮವಿದೆ. ಪೊಲೀಸರಿಗೆ ಆ ಕುರಿತು ಪ್ರಶ್ನಿಸಿದರೆ ಅತಿವೇಗದಿಂದ ಬೈಕ್ ಚಲಾಯಿಸಿದ್ದೀರಿ ಎಂದು ಗದರಿಸಿ ದಂಡ ಪಾವತಿಸಲು ಹೇಳುತ್ತಾರೆ

-ರಾಮನಗೌಡಪ್ಪ ಸಿಕಂದರ, ಅಂಚಟಗೇರಿ ರೈತ

# ಸಿದ್ಧಸಿರಿ ಎಥೆನಾಲ್ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡಲು ಸರ್ಕಾರಕ್ಕೆ ಪತ್ರ: ಸಂಜೀವನ್ ಯಾಕಾಪೂರ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಹೊರವಲಯದಲ್ಲಿರುವ ಸಿದ್ಧಸಿರಿ ಎಥೆನಾಲ್ ಕಾರ್ಖಾನೆ ಪ್ರಾರಂಭಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿ ಕ್ಷೇತ್ರದ ಮತ್ತು ಸುತ್ತಮುತ್ತಲಿನ ತಾಲ್ಲೂಕಿನ ರೈತರ ಹಿತ ಕಾಪಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಜೆಡಿಎಸ್ ಹಿರಿಯ ಮುಖಂಡ ಹಾಗೂ ಜಿಪಂ.ಮಾಜಿ ಸದಸ್ಯ ಸಂಜೀವನ್ ಯಾಕಾಪೂರ ಪತ್ರ ಬರೆದಿದ್ದಾರೆ.

**ತಾಲ್ಲೂಕಿನ ರೈತರ ಹಿತ ಕಾಪಾಡಬೇಕು**

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು,ಸಿದ್ಧಸಿರಿ ಎಥೆನಾಲ್ ಕಾರ್ಖಾನೆ ಕಳೆದ ವರ್ಷ ಪ್ರಾರಂಭವಾಗಿ ಚಿಂಚೋಳಿ ಕ್ಷೇತ್ರ ಸೇರಿದಂತೆ ಸುತ್ತಮುತ್ತಲಿನ ಸೇಡಂ,ಚಿತ್ತಾಪುರ,ಕಮಲಾಪುರ,ಕಾಳಗಿ, ಹುಮನಾಬಾದ, ಶಾಹಾಬಾದ ತಾಲ್ಲೂಕುಗಳ ರೈತರು ಬೆಳೆದ ಕಬ್ಬು ಖರೀದಿಸಿದ ಕಾರ್ಖಾನೆ ರೈತರ ಹಿತ ಕಾಪಾಡಿತ್ತು.

ಈ ವರ್ಷ ರಾಜ್ಯ ಸರ್ಕಾರ ಏಕಾಏಕಿ ರಾಜಕೀಯ ದುರುದ್ದೇಶದಿಂದ ಕಾರ್ಖಾನೆ ಬಂದ್ ಮಾಡಿರುವುದರಿಂದ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ರೈತರು,ಕಬ್ಬು ಬೆಳೆಗಾರರು ಕಂಗಾಲಾಗಿದ್ದು ರಾಜ್ಯ ಸರ್ಕಾರ ರೈತರ ನೇರವಿಗೆ ಬರಲು ನ್ಯಾಯಾಲಯದಲ್ಲಿರುವ ಪ್ರಕರಣ ಹಿಂಪಡೆದು ಕಾರ್ಖಾನೆ ಪ್ರಾರಂಬಿಸಲು ಅನುಮತಿ ನೀಡಬೇಕು. ಇದೆ 29ರಂದು ಕಾಂಗ್ರೇಸ್ ನಾಯಕರ ನೇತೃತ್ವದಲ್ಲಿ ರೈತರ ಕಬ್ಬು ಖರೀಸುವಂತೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಂಡಿದ್ದು ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಆಯಿತು ಇವರ ಹೋರಾಟ ಹಾಸ್ಯಾಸ್ಪದವಾಗಿದೆ, ಕ್ಷೇತ್ರದ ಸಂಸದರಾದ ಸಾಗರ್ ಖಂಡ್ರೆಯವರ ಕಾರ್ಖಾನೆಯಿದ್ದು ರೈತರು ಬೆಳೆದ ಕಬ್ಬು ಖರೀದಿಸಿ ಸಮಯಕ್ಕೆ ತಕ್ಕಂತೆ ರೈತರ ಹಣ ನೀಡಲಿ ಎಂದು ಹೇಳಲು ಯಾಕೆ ಹಿಂದೆಟ್ಟು ಕಾಂಗ್ರೇಸ್ ನವರು ಹಾಕುತ್ತಿದ್ದಾರೆ ಎಂಬುವುದು ಮೊದಲು ತಿಳಿದುಕೊಳ್ಳಲ್ಲಿ.

ಕಾರ್ಖಾನೆಯ ನಿಯಮಗಳನ್ನು ಉಲ್ಲಂಘನೆಯಾದರೆ ನಿಯಮಗಳು ಸರಿಪಡಿಸಿಕೊಳ್ಳಲು ಕಾನೂನು ಪ್ರಕಾರ ಹಾಗೂ ಆಡಳಿತ್ಮಾಕ ಪ್ರಕ್ರಿಯೆಗಳು ಮುಂದುವರೆಯಲಿ,ಹೊರತು ಕಾರ್ಖಾನೆ ಬಂದ್ ಮಾಡಿರುವುದರಿಂದ ರೈತರು ತುಂಬಾ ಕಷ್ಟದಲ್ಲಿದ್ದು ಸರ್ಕಾರ ಕಾರ್ಖಾನೆ ಪ್ರಾರಂಭಿಸಲಿ ಅಥವಾ ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ ಕುಟುಂಬಸ್ಥರ ಕಾರ್ಖಾನೆಗಳು ಇದ್ದು ರೈತರು ಬೆಳೆದ ಕಬ್ಬು ಖರೀದಿಸಿಕೊಳ್ಳಲು ನಿರ್ಧೇಶನ ನೀಡಲಿ ಎಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಅವರು ಆಗ್ರಹಿಸಿದ್ದಾರೆ.

ಜೆಡಿಎಸ್ ಅಧ್ಯಕ್ಷ ರವಿಶಂಕರರಡ್ಡಿ,ವಿಷ್ಣುಕಾಂತ ಮೂಲಗಿ ,ಪುರಸಭೆ ಸದಸ್ಯರುಗಳು

# ಭವಿಷ್ಯದ ಶಿಕ್ಷಕರಾಗಿರುವ ಪ್ರಶಿಕ್ಷಣಾರ್ಥಿಗಳು ಶಿಸ್ತು, ಸಂಯಮ, ಸಮಯಪ್ರಜ್ಞೆ ಬೆಳೆಸಿಕೊಳ್ಳಬೇಕು

• ಉದಯವಾಹಿನಿ, ಮುದ್ದೇಬಿಹಾಳ

ಸಮಾಜಸೇವೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವ ಪೌರತ್ವ ತರಬೇತಿ ಶಿಬಿರದ ಸದುಪಯೋಗವನ್ನು ಪ್ರಶಿಕ್ಷಣಾರ್ಥಿಗಳು ಪಡೆದುಕೊಳ್ಳಬೇಕು. ಭವಿಷ್ಯದ ಶಿಕ್ಷಕರಾಗಿರುವ ಪ್ರಶಿಕ್ಷಣಾರ್ಥಿಗಳು ಶಿಸ್ತು, ಸಂಯಮ, ಸಮಯಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದು ಎಂಜಿವಿಸಿ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ.ಎಸ್.ಎನ್.ಪೋಲೇಶಿ ಹೇಳಿದರು. ಇಲ್ಲಿನ ಎಸ್‌ಜಿವಿಸಿ ವಿದ್ಯಾಪ್ರಸಾರಕ ಟ್ರಸ್ಟ್‌ನ ಎಂಜಿವಿಸಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಪ್ರಾರಂಭಗೊಂಡ 3 ದಿನಗಳ ಎಂಜಿವಿಸಿ ಬಿಎಡ್ ಕಾಲೇಜಿನ ಪೌರಕತ್ವ ತರಬೇತಿ ಶಿಬಿರವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಉದಯವಾಹಿನಿ ಚಿತ್ರ

**ಪೌರತ್ವ ಶಿಬಿರಕ್ಕೆ ಚಾಲನೆ**

ಪ್ರಶಿಕ್ಷಣಾರ್ಥಿಗಳು ಶಿಬಿರದ ಮೂಲಕ ಶಿಸ್ತು ಬೆಳೆಸಿಕೊಂಡು ಸಾಂಘಿಕ ಜೀವನದ ಮಹತ್ವ, ಪರಿಸರ ಬಗೆಗಿನ ಕಾಳಜಿ, ಒಗ್ಗಟ್ಟಿನ ಮನೋಭಾವ ಅಳವಡಿಸಿಕೊಂಡು ಸಮಾಜಕ್ಕೆ ಉಪಯುಕ್ತ ಶಿಕ್ಷಕರಾಗಿ ಹೊರಹೊಮ್ಮಬೇಕು

-ಅಶೋಕ ತಡಸದ, ಟ್ರಸ್ಟ್ನ ಕಾರ್ಯಾಧ್ಯಕ್ಷ

ಬಿಎಡ್ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್. ಬಂಡರಗಲ್ ಅವರು ಪೌರತ್ವದ ಮಹತ್ವ ಕುರಿತು ಮಾತನಾಡುತ್ತ ಪ್ರಶಿಕ್ಷಣಾರ್ಥಿಗಳು ಮುಂದಿನ ದಿನಗಳಲ್ಲಿ ಶಿಕ್ಷಕರಾಗಿ ಸಮೀಕ್ಷಾ ಕಾರ್ಯ, ಚುನಾವಣಾ ಪ್ರಕ್ರಿಯೆ, ಪರಿಸರ ಸಂರಕ್ಷಣೆ, ಸಮಾಜ ಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಾಗಿರುವುದರಿಂದ ಇಂಥ ಶಿಬಿರಗಳು ಸಹಕಾರಿಯಾಗಿರಲಿವೆ ಎಂದರು. ಸಹಾಯಕ ಪ್ರಾಧ್ಯಾಪಕ ಬಿ.ಎನ್.ಬೋಳಿಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುಳಾ ದೊಡಮನಿ ಪ್ರಾರ್ಥಿಸಿದರು. ಎನ್.ಟಿ.ಗೌಡರ ಸ್ವಾಗತಿಸಿದರು. ಎಚ್.ಡಿ.ನದಾಫ ನಿರೂಪಿಸಿದರು. ಬಿ.ಎಸ್.ಓದುಸೋಮಠ ವಂದಿಸಿದರು.

# ನಾಮಪತ್ರ ಸಲ್ಲಿಸಿದ ಭರತ್ ಬೊಮ್ಮಾಯಿ

• ಉದಯವಾಹಿನಿ, ಹಾವೇರಿ

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ತಂದೆ ಬಸವರಾಜ ಹಾಗೂ ಮುಖಂಡರ ಸಮ್ಮುಖದಲ್ಲಿ ಮೆರವಣಿಗೆ ನಡೆಸಿ ನಾಮಪತ್ರ ಸಲ್ಲಿಕೆ ಮಾಡಿದರು.ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ್ದ ಭರತ್, ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಅವರ ಜೊತೆ ಶುಕ್ರವಾರ ಶಿಗ್ಗಾವಿಯಲ್ಲಿ ಮೆರವಣಿಗೆ ನಡೆಸಿ ಉಮೇದುವಾರಿಕೆ ಸಲ್ಲಿಸಿದರು. ಶಿಗ್ಗಾವಿಯಲ್ಲಿ ನೂರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಕ್ಷೇತ್ರದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಕೇಂದ್ರಕ್ಕೆ ಬಂದು ಬಿಜೆಪಿಗೆ ಮತ ಚಲಾಯಿಸಬೇಕು. ಬಸವರಾಜ ಬೊಮ್ಮಾಯಿ ಅವರ ರೀತಿಯಲ್ಲಿ ಹೆಚ್ಚಿನ ಮತಗಳ ಅಂತರದಲ್ಲಿ ಭರತ್ ಅವರನ್ನು ಗೆಲ್ಲಿಸಬೇಕು' ಎಂದರು. ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಅಭಿವೃದ್ಧಿ ಕೆಲಸ ಮುಂದುವರಿಯಲು ಹಾಗೂ ಕ್ಷೇತ್ರದ ಜನರ ರಕ್ಷಣೆಗಾಗಿ ಭರತ್ ಬೊಮ್ಮಾಯಿ ಅವರಿಗೆ ಆಶೀರ್ವದಿಸಿ' ಎಂದರು.


ಉದಯವಾಹಿನಿ ಚಿತ್ರ

**ಬಿಎಸ್‌ವೈ ಸಾಥ್**

ಅಭ್ಯರ್ಥಿ ಭರತ್ ಬೊಮ್ಮಾಯಿ, ಕ್ಷೇತ್ರದ ಅಭಿವೃದ್ಧಿ ಬಗ್ಗೆ ತಂದೆ ಕನಸು ಕಂಡಿದ್ದಾರೆ. ಕನಸು ನನಸು ಮಾಡಲು ನಾನು ಕೆಲಸ ಮಾಡುತ್ತೇನೆ. ಮತದ

# ಕೆನಡಾಕ್ಕೆ ಓದಲು ಹೋಗುವ ವಿದೇಶಿ ವಿದ್ಯಾರ್ಥಿನಿಯರ ಮಾರಾಟ

## ವಿದೇಶಗಳಿಂದ ಕೆನಡಾಕ್ಕೆ ಬರುವ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂದು ಹೇಳಿದ ಬ್ರೌನ್

**ಕೆನಡಾ:** ಉನ್ನತ ವ್ಯಾಸಂಗಕ್ಕಾಗಿ ಕೆನಡಾಕ್ಕೆ ಹೋಗುವ ವಿದೇಶಿ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯಗಳನ್ನು ಎಸಗಲಾಗುತ್ತಿದೆ. ಅಷ್ಟೇ ಅಲ್ಲದೆ, ಅವರನ್ನು ಮಾರಾಟ ಮಾಡಲಾಗುತ್ತಿದೆ ಎಂದು ಕೆನಡಾದ ನಗರವಾದ ಬ್ರಾಂಪ್ಟನ್ ನಗರದ ಮೇಯರ್ ಆಗಿರುವ ಪ್ಯಾಟ್ರಿಕ್ ಬ್ರೌನ್ ಅವರು ಆರೋಪಿಸಿದ್ದಾರೆ. ಅನೇಕ ದೇಶಗಳಿಂದ ಕೆನಡಾಕ್ಕೆ ಉನ್ನತ ವ್ಯಾಸಂಗಕ್ಕಾಗಿ ಅನೇಕ ಯುವತಿಯರು ಬರುತ್ತಾರೆ. ಅನೇಕ ಕನಸುಗಳನ್ನು ಹೊತ್ತು ಇಲ್ಲಿಗೆ ಬರುವ ಅವರಲ್ಲಿ ಹಲವರ ಮೇಲೆ ಇಲ್ಲಿಯವರೆಗೆ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ಬಹಿರಂಗವಾಗಿಯೇ ಅವರನ್ನು ಕಳ್ಳಸಾಗಣೆ ಮಾಡಲಾಗುತ್ತಿದೆ. ಎಂದು ಬ್ರೌನ್ ಅವರು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆನಡಾವು ಇಂದು ಮಾನವ ಕಳ್ಳಸಾಗಣೆ ಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕುಖ್ಯಾತಿಯನ್ನು ಪಡೆದಿದೆ. ನಮ್ಮ ಸಮಾಜಕ್ಕೆ ಇದೊಂದು ಶಾಪವಾಗಿ ಪರಿಣಮಿಸಿದೆ. ಇದೆಂದು ಕ್ಯಾನ್ಸರ್ ಗಡ್ಡೆಯಾಗಿ ಪರಿಣಮಿಸಿದೆ. ನಾವು ಇಂಥ ಅನಿಷ್ಟದ ವಿರುದ್ಧ ಹೋರಾಟ ಮಾಡಬೇಕಿದೆ ಎಂದು ಅವರು ಹೇಳಿದರು. ಬ್ರೌನ್ ಅವರ ಈ ಹೇಳಿಕೆಯು ಅಂತಾರಾಷ್ಟ್ರೀಯ ವಲಯದಲ್ಲಿ ಭಾರೀ ಸದ್ದು ಮಾಡಿದೆ. ಏಕೆಂದರೆ,

**ಸಮಾಜಕ್ಕೆ ಇದೊಂದು ಶಾಪ**

**ಅಮೆರಿಕ ಖಂಡದಲ್ಲಿರುವ ಕೆನಡಾ ರಾಷ್ಟ್ರದಲ್ಲಿ ಮಾನವ ಕಳ್ಳಸಾಗಣೆಯು ನಡೆಯುತ್ತಲೇ ಇದೆ ಎಂದು ಅಲ್ಲಿನ ಪ್ರಮುಖ ನಗರವಾದ ಬ್ರಾಂಪ್ಟನ್ ನ ಮೇಯರ್ ಪ್ಯಾಟ್ರಿಕ್ ಬ್ರೌನ್ ತಿಳಿಸಿದ್ದಾರೆ. ಇತ್ತೀಚೆಗೆ, ಬ್ರಾಂಪ್ಟನ್ ನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಂದ ಕೆನಡಾಕ್ಕೆ ಬರುವ ವಿದೇಶಿ ಉದ್ಯೋಗಿಗಳನ್ನು ಟಾರ್ಗೆಟ್ ಮಾಡಲಾಗುತ್ತದೆ. ಹೆಚ್ಚಾಗಿ ಸಿಂಗಲ್ ಆಗಿರುವಂಥವರು, ಓದಿಗಾಗಿ ಹಣ ಬೇಕಾಗಿರುವಂಥವರು ಅಥವಾ ಹೇಳಲು ಕೇಳಲು ಯಾರೂ ಇಲ್ಲದಂಥವರನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದರು.**

- **ಕೆನಡಾದಲ್ಲಿ ಮಾನವ ಕಳ್ಳಸಾಗಣೆಯು ಅವ್ಯಾಹತವಾಗಿ ನಡೆಯುತ್ತಿದೆ.**
- **ಬ್ರಾಂಪ್ಟನ್ ನ ಮೇಯರ್ ಪ್ಯಾಟ್ರಿಕ್ ಬ್ರೌನ್ ಬಹಿರಂಗ ಹೇಳಿಕೆ.**

ಮಾನವ ಕಳ್ಳಸಾಗಣೆಯು ಕೆನಡಾದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ ಎಂದು ಈಗಾಗಲೇ ಕೆನಡಾದಲ್ಲಿರುವ ಹಲವಾರು ವಿದ್ಯಾರ್ಥಿ ಸಂಘಟನೆಗಳು ಹಲವಾರು ಬಾರಿ ಪ್ರತಿಭಟನೆ ನಡೆಸಿದ್ದವು. ಹಲವಾರು ಆರೋಪಗಳು ಕೇಳಿಬಂದಿದ್ದವು. ಆದರೆ, ಸರ್ಕಾರ ಮಾತ್ರ ಮಗುಮ್ಮಾಗಿತ್ತು. ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಈಗ ಬ್ರೌನ್ ಅವರ ಹೇಳಿಕೆಯಿಂದಾಗಿ ಇದನ್ನು ಸರ್ಕಾರದ ಪ್ರತಿನಿಧಿಯೊಬ್ಬರು ಬಹಿರಂಗವಾಗಿ ಒಪ್ಪಿಕೊಂಡಂತಾಗಿದೆ. ಯುವತಿಯರನ್ನು ಮಾತ್ರವಲ್ಲದೆ, ಯುವಕರನ್ನೂ ಸಹ ಮಾನವ ಕಳ್ಳಸಾಗಣೆ ಮಾಡಲಾಗುತ್ತಿದೆ. ಸುಲಭವಾಗಿ ಪರಿಚಯವಾಗುವಂಥ, ಹೇಳಲು ಕೇಳಲು ಯಾರೂ ಇಲ್ಲದಂಥ ಯುವಕ – ಯುವತಿಯನ್ನೇ ಮೊದಲು ಟಾರ್ಗೆಟ್ ಮಾಡಲಾಗುತ್ತದೆ. ಬ್ರಾಪ್ಟನ್ ನಗರದಲ್ಲಿರುವ ದೊಡ್ಡ ಶ್ರೀಮಂತರು, ಭೂ ಮಾಲೀಕರು, ಪ್ರೇಮಕ್ಕಾಗಿ ಹಾತೊರೆಯುವಂಥವರು, ಇಂಥ ಯುವಕರು, ಯುವತಿಯನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಇಂಥ ಸಂದರ್ಭಗಳಲ್ಲಿ ಅವರನ್ನು ಕಳ್ಳಸಾಗಣೆ ಮಾಡುತ್ತದೆ ಎಂದು ಬ್ರೌನ್ ತಿಳಿಸಿದ್ದಾರೆ.

ಇನ್ನು, ಓದಲು ಬರುವ ವಿದ್ಯಾರ್ಥಿ ಗಳನ್ನು ಮಾತ್ರವಲ್ಲದೆ, ವಿದೇಶಗಳಲ್ಲಿರುವ ಹಲವಾರು ಯುವಕ, ಯುವತಿಯರಿಗೆ ಉತ್ತಮ ಉದ್ಯೋಗದ ಭರವಸೆಯನ್ನೂ ಸಹ ಆನ್ ಲೈನ್ ಮೂಲಕ ನೀಡಿ ಅವರನ್ನು ಆಕರ್ಷಿಸಿ ಅವರನ್ನು ಕೆನಡಾದಲ್ಲಿ ವೇಶ್ಯಾವೃತ್ತಿಗೋ ಅಥವಾ ಮಾನವ ಕಳ್ಳಸಾಗಣೆಗೋ ಬಳಸಲಾಗುತ್ತದೆ ಎಂದು ಬ್ರೌನ್ ಅವರು ತಿಳಿಸಿದ್ದಾರೆ.

# ಗುಲ್ಮರ್ಗ್ ಉಗ್ರರ ದಾಳಿಯಲ್ಲಿ ಹುತಾತ್ಮರಾದ ಯೋಧರ ಸಂಖ್ಯೆ 4ಕ್ಕೆ ಏರಿಕೆ

**ಶ್ರೀನಗರ:** ಜಮ್ಮು ಮತ್ತು ಕಾಶೀರದ ಗುಲ್ಮರ್ಗ್ ನಲ್ಲಿ ಗುರುವಾರ ನಡೆದ ಭಯೋತ್ಪಾದಕ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಯೋಧರು ಹುತಾತ್ಮರಾಗಿದ್ದು, ಹೊಂಚುದಾಳಿಯಲ್ಲಿ ಸತ್ತವರ ಸಂಖ್ಯೆ ನಾಲ್ಕಕ್ಕೆ ಏರಿದೆ. ಇಬ್ಬರು ಸೇನಾ ಪೋರ್ಟರ್‌ಗಳು ಸಾವನ್ನಪ್ಪಿದ್ದು, ಇನ್ನೊಬ್ಬ ಪೋರ್ಟರ್ ಮತ್ತು ಯೋಧ ಗಾಯಗೊಂಡಿದ್ದರು. ಉತ್ತರ ಕಾಶೀರದ ಬಾರಾಮುಲ್ಲಾ ಜಿಲ್ಲೆಯ ಪ್ರವಾಸಿ ತಾಣ ಗುಲಾರ್ಗ್ ನಿಂದ ಆರು ಕಿಲೋಮೀಟರ್ ದೂರದಲ್ಲಿ ಭಯೋತ್ಪಾದಕರು ಸೇನಾ ಪಡೆಯ ವಾಹನದ ಮೇಲೆ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಜೆ ಅಫ್ರಾವತ್ ಶ್ರೇಣಿಯ ನಾಗಿನ್ ಪೋಸ್ಟ್‌ಗೆ ತೆರಳುತ್ತಿದ್ದಾಗ ಬೋಟಾ ಪತ್ರಿ ಪ್ರದೇಶದಲ್ಲಿ ಸೇನಾ ವಾಹನದ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ. ಇಬ್ಬರು ಹಮಾಲಿಗಳ ಸಾವನ್ನು ದಢಪಡಿಸಿದ ಅಧಿಕಾರಿಗಳು ಗಾಯಗೊಂಡ ಯೋಧರಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿಸಿದ್ದರು. ದಾಳಿಗೆ ಒಳಗಾದಾಗ ವಾಹನದಲ್ಲಿದ್ದ ಸೈನಿಕರು ಪ್ರತೀಕಾರದ ಗುಂಡಿನ ದಾಳಿ ನಡೆಸಿದರು ಎಂದು ಅವರು ಹೇಳಿದ್ದಾರೆ.

ಈ ಪ್ರದೇಶವು ಸಂಪೂರ್ಣವಾಗಿ ಸೇನೆಯ ಪ್ರಾಬಲ್ಯದಲ್ಲಿದೆ ಮತ್ತು ಬೇಸಿಗೆಯ ಆರಂಭದಲ್ಲಿ ಭಯೋತ್ಪಾದಕ ಗುಂಪು ನುಸುಳಿದೆ ಮತ್ತು ಅಫ್ರಾವತ್ ಶ್ರೇಣಿಯ ಎತ್ತರದ ಪ್ರದೇಶಗಳಲ್ಲಿ ಆಶ್ರಯ ಪಡೆದಿದೆ ಎಂದು ಇತ್ತೀಚೆಗೆ ವರದಿಗಳಿವೆ ಎಂದು ಅವರು ಹೇಳಿದರು. ನಾನು ಈ ದಾಳಿಯನ್ನು ಸಾಧ್ಯವಾದಷ್ಟು ಪ್ರಬಲ ಪದಗಳಲ್ಲಿ ಖಂಡಿಸುತ್ತೇನೆ ಮತ್ತು ಪ್ರಾಣ ಕಳೆದುಕೊಂಡ ಜನರ ಪ್ರೀತಿಪಾತ್ರರಿಗೆ ನನ್ನ ಸಂತಾಪವನ್ನು ಕಳುಹಿಸುತ್ತೇನೆ. ಗಾಯಗೊಂಡವರು ಸಂಪೂರ್ಣ ಮತ್ತು ಶೀಘ್ರವಾಗಿ ಚೇತರಿಸಿಕೊಳ್ಳಲು ನಾನು ಪ್ರಾರ್ಥಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಕೂಡ ದಾಳಿಯನ್ನು ಖಂಡಿಸಿದ್ದಾರೆ.

**ಕಳವಳಕಾರಿ ವಿಷಯ**

**ಜಮು ಮತ್ತು ಕಾಶೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಕಣಿವೆಯಲ್ಲಿ ಇತ್ತೀಚೆಗೆ ನಡೆಯುತ್ತಿರುವ ದಾಳಿಗಳು ಗಂಭೀರ ಕಳವಳಕಾರಿ ವಿಷಯವಾಗಿದೆ. ಉತ್ತರ ಕಾಶೀರದ ಬೋಟಾ ಪತ್ರಿ ಪ್ರದೇಶದಲ್ಲಿ ಸೇನಾ ವಾಹನಗಳ ಮೇಲಿನ ದಾಳಿಯ ಬಗ್ಗೆ ಅತ್ಯಂತ ದುರದಷ್ಟಕರ ಸುದ್ದಿ, ಇದು ಕೆಲವು ಸಾವುನೋವುಗಳು, ಗಾಯಗಳಿಗೆ ಕಾರಣವಾಯಿತು. ಕಾಶೀರದಲ್ಲಿ ಈ ಇತ್ತೀಚಿನ ದಾಳಿಗಳು ಗಂಭೀರ ಕಳವಳಕಾರಿ ವಿಷಯವಾಗಿದೆ ಎಂದು ಅವರು ಎಕ್ಸ್ ಮಾಡಿದ್ದಾರೆ.**

# ಕಮಲಾಗಿಂತ ಟ್ರಂಪ್ ಅಲ್ಪಮುನ್ನಡೆ; ಸಮೀಕ್ಷೆ

**ವಾಷಿಂಗ್ಟನ್:** ನವೆಂಬರ್ 5ರಂದು ಅಮೆರಿಕ ಅಧ್ಯಕ್ಷೀಯ ಚುನಾವಣೆ ನಡೆಯಲಿದ್ದು, ಅದಕ್ಕೂ ಮುನ್ನ ನಡೆದಿರುವ ಚುನಾವಣಾ ಪೂರ್ವ ಸಮೀಕ್ಷೆಗಳಲ್ಲಿ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು, ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ಅವರಿಗಿಂತ ಅಲ್ಪ ಮುನ್ನಡೆ ಪಡೆದಿದ್ದಾರೆ. ವಾಲ್‌ಸ್ಟ್ರೀಟ್ ಜರ್ನಲ್ ನಡೆಸಿರುವ ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಟ್ರಂಪ್ ಅವರು ಹ್ಯಾರಿಸ್‌ಗಿಂತಲೂ ಶೇಕಡ 2 ಪಾಯಿಂಟ್‌ಗಳಿಂದ ಮುನ್ನಡೆ ಕಾಯ್ದುಕೊಂಡಿದ್ದಾರೆ. ಟ್ರಂಪ್ ಪರ ಶೇಕಡ 47ರಷ್ಟು ಮತದಾರರ ಒಲವು ಕಂಡುಬಂದರೆ, ಕಮಲಾ ಪರ ಶೇಕಡ 45ರಷ್ಟು ಒಲವು ಕಂಡುಬಂದಿದೆ. ಸಿನಿಮಾ ಅಂತೆಯೇ, ಸಿಎನ್‌ಬಿಸಿ ಆಲ್ ಅಮೆರಿಕ ಸಮೀಕ್ಷೆಯ ಪ್ರಕಾರ, ಟ್ರಂಪ್ ಶೇಕಡ 48 ಅಂಶಗಳಷ್ಟು ಮುಂದಿದ್ದರೆ, ಕಮಲಾ ಹ್ಯಾರಿಸ್ ಶೇಕಡ 46ರಷ್ಟು ಅಂಶಗಳಷ್ಟು ಮುನ್ನಡೆ ಸಾಧಿಸಿದ್ದಾರೆ.

ಆಗಸ್ಟ್‌ನಿಂದ ಈ ಟ್ರೆಂಡ್ ಬದಲಾಗಿಲ್ಲ ಎಂದು ಅದು ತಿಳಿಸಿದೆ. ಏಳು ಪ್ರಮುಖ ರಾಜ್ಯಗಳಲ್ಲಿ ಟ್ರಂಪ್ ಮುನ್ನಡೆ ಸಾಧಿಸಿದ್ದಾರೆ. ಆದರೆ, ಎಲ್ಲಾ ಪ್ರಮುಖ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮೀಕ್ಷೆಗಳನ್ನು ಟ್ರ್ಯಾಕ್ ಮಾಡುವ ShbReal-ClearPolitics ಪ್ರಕಾರ, ಹ್ಯಾರಿಸ್ ರಾಷ್ಟ್ರೀಯ ಮಟ್ಟದಲ್ಲಿ ಟ್ರಂಪ್‌ಗಿಂತ ಶೇಕಡ 0.3 ಅಂಶಗಳ ಮುನ್ನಡೆಯನ್ನು ಹೊಂದಿದ್ದಾರೆ ಎಂದು ಹೇಳಿದೆ. ಅಧ್ಯಕ್ಷೀಯ ಚುನಾವಣೆ ನಡೆಯಲಿರುವ ಪ್ರಮುಖ ರಾಜ್ಯಗಳಾದ ಅರಿಜೋನಾ, ನೆವಾಡ, ವಿಸ್‌ಸಿನ್, ಮಿಚಿಗನ್, ಪನ್ಸಿಲ್ವೆನಿಯಾ, ನಾರ್ತ್ ಕರೋಲಿನಾ, ಜಾರ್ಜಿಯಾದಲ್ಲಿ ಟ್ರಂಪ್, ಕಮಲಾ ಹ್ಯಾರಿಸ್‌ಗಿಂತಲೂ ಶೇಕಡ 0.9 ಅಂಶಗಳಷ್ಟು ಮುಂದಿದ್ದಾರೆ.

ಕಾನೂನು ಬದ್ದ ಬೆಟ್ಟಿಂಗ್, ಚುನಾವಣಾ ಅಂಕಿ ಅಂಶಗಳನ್ನು ಆಧರಿಸಿ ಅಂದಾಜು ಮಾಡುವ ಅಮೆರಿಕದ ಹಣಕಾಸು ವಿನಿಮಯ ಮತ್ತು ಭವಿಷ್ಯ ಮಾರುಕಟ್ಟೆ ಕಲ್ಶಿ ಪ್ರಕಾರ, ಹ್ಯಾರಿಸ್‌ಗಿಂತ ಟ್ರಂಪ್ ಮುನ್ನಡೆ ಸಾಧಿಸಿದ್ದಾರೆ. ಇದರ ಪ್ರಕಾರ, ಟ್ರಂಪ್ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ಶೇಕಡ 61 ರಷ್ಟಿದ್ದರೆ, ಹ್ಯಾರಿಸ್ ಗೆಲ್ಲುವ ಸಾಧ್ಯತೆ ಶೇಕಡ 39ರಷ್ಟಿದೆ. ವಾಲ್ ಸ್ಟ್ರೀಟ್ ಜರ್ನಲ್ ಹೇಳುವಂತೆ ಹ್ಯಾರಿಸ್ ಅವರ ಅಭಿಪ್ರಾಯಗಳು ಆಗಸ್ಟ್‌ನಿಂದ ಹೆಚ್ಚು ಋಣಾತ್ಮಕವಾಗಿವೆ. ಪರ ಇದ್ದಷ್ಟೇ, ವಿರೋಧಿ ಮತದಾರರೂ ಸೃಷ್ಟಿಯಾಗಿದ್ದಾರೆ. ಇದಕ್ಕೆ ವಿರುದ್ಧವಾಗಿ, ಟ್ರಂಪ್ ಅವರ ಬಗೆಗಿನ ಅಭಿಪ್ರಾಯಗಳು ಉತ್ತಮವಾಗಿವೆ. ಶೇಕಡ 52ರಷ್ಟು ಜನ ಅವರ ಕಾರ್ಯವೈಖರಿ ಒಪ್ಪಿಕೊಂಡಿದ್ದರೆ, ಶೇಕಡ 48ರಷ್ಟು ಜನರು ತಿರಸ್ಕರಿಸಿದ್ದಾರೆ ಎಂದು ಸಮೀಕ್ಷೆಗಳು ಹೇಳಿವೆ.

# ಜರ್ಮನ್ ಚಾನ್ಸೆಲರ್ ಜೊತೆ ಪ್ರಧಾನಿ ಮೋದಿ ಮಾತುಕತೆ

**ನವದೆಹಲಿ:** ಜರ್ಮನಿಯ ಚಾನ್ಸೆಲರ್ ಓಲಾಫ್ ಸ್ಕೋಲ್ಜ್, ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹಲವಾರು ಪ್ರಮುಖ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಕಾರ್ಯತಂತ್ರದ ಸಂಬಂಧಗಳನ್ನು ಬಲಪಡಿಸುವ ಕುರಿತು ವ್ಯಾಪಕ ಚರ್ಚೆ ನಡೆಸಿದರು.

ಭಾರತಕ್ಕೆ ಮೂರು ದಿನಗಳ ಅಧಿಕೃತ ಭೇಟಿಯ ಭಾಗವಾಗಿ ಸ್ಕೋಲ್ಜ್ ತಡರಾತ್ರಿ ದೆಹಲಿಗೆ ಆಗಮಿಸಿದರು. ಕೇಂದ್ರ ಗಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರನ್ನು ಬರಮಾಡಿಕೊಂಡರು. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಕೋಲ್ಜ್ ಅವರನ್ನು ಜರ್ಮನ್ ಭಾಷೆಯಲ್ಲಿ ಸ್ವಾಗತಿಸಿತು ಮತ್ತು ಎಕ್ಸ್ ನಲ್ಲಿ ಚಿತ್ರಗಳನ್ನು ಹಂಚಿಕೊಂಡಿತು. ಮೋದಿಯವರ ಆಹ್ವಾನದ ಮೇರೆಗೆ ಸ್ಕೋಲ್ಜ್ ಇಂದಿನಿಂದ 26 ರವರೆಗೆ ಭಾರತಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಇಲಾಖೆ ಈ ಹಿಂದೆ ಹೇಳಿಕೆಯಲ್ಲಿ ತಿಳಿಸಿತ್ತು. ರಕ್ಷಣೆ, ವ್ಯಾಪಾರ ಮತ್ತು ಶುದ್ಧ ಇಂಧನ ಕ್ಷೇತ್ರಗಳು ಸೇರಿದಂತೆ ದ್ವಿಪಕ್ಷೀಯ ಕಾರ್ಯತಂತ್ರದ ಬಾಂಧವ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಉಭಯ ನಾಯಕರು ವ್ಯಾಪಕ ಮಾತುಕತೆ ನಡೆಸಿದರು. ಮೋದಿ ಮತ್ತು ಸ್ಕೋಲ್ಜ್ ಹೈದರಾಬಾದ್ ಹೌಸ್‌ನಲ್ಲಿ ಏಳನೇ ಅಂತರ ಸರ್ಕಾರಿ ಸಮಾಲೋಚನೆಗಳ (ಐಜಿಸಿ) ಸಹ–ಅಧ್ಯಕ್ಷರಾಗಲಿದ್ದಾರೆ.

ಐಎಇ ಒಂದು ಸಂಪೂರ್ಣ–ಸರ್ಕಾರದ ಚೌಕಟ್ಟಾಗಿದೆ, ಅದರ ಅಡಿಯಲ್ಲಿ ಎರಡೂ ಕಡೆಯ ಮಂತ್ರಿಗಳು ತಮ ಜವಾಬ್ದಾರಿಯ ಕ್ಷೇತ್ರಗಳಲ್ಲಿ ಚರ್ಚೆಗಳನ್ನು ನಡೆಸುತ್ತಾರೆ ಮತ್ತು ಪ್ರಧಾನ ಮಂತ್ರಿ ಮತ್ತು ಕುಲಪತಿಗಳಿಗೆ ತಮ್ಮ ಚರ್ಚೆಯ ಫಲಿತಾಂಶದ ಬಗ್ಗೆ ವರದಿ ಮಾಡುತ್ತಾರೆ.

ಸ್ಕೋಲ್ಜ್ ಅವರಿಗಿಂತ ಮುಂಚಿತವಾಗಿ ಆಗಮಿಸಿದ ಜರ್ಮನಿಯ ಉಪಕುಲಪತಿ ರಾಬರ್ಟ್ ಹ್ಯಾಬೆಕ್ ಅವರು ಇಂದು ಮತ್ತು ನಾಳೆ ದೆಹಲಿಯಲ್ಲಿ ನಡೆಯಲಿರುವ ಜರ್ಮನ್ ವ್ಯಾಪಾರದ 18ನೇ ಏಷ್ಯಾ–ಪೆಸಿಫಿಕ್ ಸಮೇಳನದ ಮಹತ್ವದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದರು.

# ತಿರುಪತಿಯಲ್ಲಿ ಆತಂಕ ಸೃಷ್ಟಿಸಿದ ಬಾಂಬ್ ಬೆದರಿಕೆ

**ತಿರುಪತಿ:** ಕಳೆದ ಕೆಲ ದಿನಗಳಿಂದ ವಿಮಾನಗಳಲ್ಲಿ ಬಾಂಬ್ ಇಟ್ಟಿರುವ ಬೆದರಿಕೆ ಪ್ರಕರಣಗಳು ಪದೇ ಪದೇ ಹೆಚ್ಚಾಗುತ್ತಿದ್ದು, ಇದೀಗ ಇಂತಹುದೇ ಪ್ರಕರಣ ವಿಶ್ವಪ್ರಸಿದ್ಧ ತಿರುಪತಿಯಲ್ಲಿ ಕೇಳಿ ಬಂದಿದೆ. ಆಂಧ್ರಪ್ರದೇಶದ ತಿರುಪತಿಯಲ್ಲಿ ಬಾಂಬ್ ಬೆದರಿಕೆ ಇರುವ ಬಗ್ಗೆ ಆಘಾತಕಾರಿ ದೂರು ಕೇಳಿ ಬಂದಿದ್ದು, ರಾಜ್ಯ ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದಾರೆ.

ಹೋಟೆಲ್ಲಿ ಬಾಂಬ್ ಇರಿಸಿರುವ ಬಗ್ಗೆ ಕರೆ ಮತ್ತು ಇಮೇಲ್ ಮೂಲಕ ಮಾಹಿತಿ ನೀಡಲಾಗಿತ್ತು ಎಂದು ಹೇಳಲಾಗುತ್ತಿದೆ. ಹೋಟೆಲ್‌ಗಳಲ್ಲಿ ಬಾಂಬ್ ಸ್ಫೋಟದ ಸುದ್ದಿ ತಿಳಿದ ತಕ್ಷಣ ತಿರುಪತಿ ಪೊಲೀಸರು ನಗರದ ಹೋಟೆಲ್‌ಗಳಲ್ಲಿ ತೀವ್ರ ಶೋಧ ನಡೆಸಿದ್ದಾರೆ. ಬಾಂಬ್ ನಿಷ್ಕಿಯ ದಳ ನಿನ್ನೆ ರಾತ್ರಿ 10ರಿಂದ ಬೆಳಗಿನಜಾವ 2 ಗಂಟೆವರೆಗೆ ವಿವಿಧ ಹೋಟೆಲ್ಗಳಲ್ಲಿ ಶೋಧ ನಡೆಸಿತು. ಲೀಲಾ ಮಹಾಲ್ ಬಳಿ ಮೂರು ಹೋಟೆಲ್‌ಗಳನ್ನು ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿತ್ತು. ಸದ್ಯ ಬೆದರಿಕೆ ಕರೆಗಳ ವಿವರಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ನಿರತರಾಗಿದ್ದಾರೆ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದಾರೆ.

ಮೂರು ಹೊಟೇಲ್‌ಗಳಿಗೆ ಬಾಂಬ್ ಬೆದರಿಕೆ ಎಚ್ಚರಿಕೆ ಬಂದಿದ್ದು, ಇಮೇಲ್ಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ವಿವಿಧ ಕೋನಗಳಲ್ಲಿ ತನಿಖೆ ನಡೆಸಲಾಗುತ್ತಿದೆ, ಶೀಘ್ರವೇ ಆರೋಪಿಗಳನ್ನು ಪತ್ತೆ ಮಾಡುತ್ತೇವೆ ಎಂದು ಇನ್ಸ್‌ಪೆಕ್ಟರ್ ಶ್ರೀನಿವಾಸುಲು ತಿಳಿಸಿದ್ದಾರೆ.

ಕಳೆದ ಕೆಲ ದಿನಗಳಿಂದ ದೇಶದಲ್ಲಿ ಆರಂಭವಾದ ಬಾಂಬ್ ಬೆದರಿಕೆಗಳ ಸರಣಿ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ವಿಮಾನಕ್ಕೆ ಬೆದರಿಕೆ ಹಾಕುವ ಮೂಲಕ ಬಾಂಬ್ ಬೆದರಿಕೆ ಆರಂಭವಾಗಿತ್ತು. ಕಳೆದ 20 ದಿನಗಳಲ್ಲಿ ಸುಮಾರು 80ರಿಂದ 90 ದೇಶೀಯ ಮತ್ತು ಅಂತರಾಷ್ಟ್ರೀಯ ವಿಮಾನಗಳಿಗೆ ಬಾಂಬ್ ಬೆದರಿಕೆಗಳು ಬಂದಿವೆ. ಇದರಿಂದಾಗಿ ಹಲವು ವಿಮಾನಗಳು ದಿಕ್ಕು ತಪ್ಪಿಸಿದ್ದು, ಹಲವರು ತುರ್ತು ಭೂಸ್ಪರ್ಶ ಮಾಡಿದ್ದಾರೆ.

**ಈ ಬೆದರಿಕೆಯ ಇಮೇಲ್‌ನಲ್ಲಿ ಈ ವರ್ಷದ ಫೆಬ್ರವರಿಯಲ್ಲಿ ಬಂಧಿಸಲಾದ ಡ್ರಗ್ ಕಿಂಗ್ಪಿನ್ ಜಾಫರ್ ಸಿದ್ದಿಕ್ ಹೆಸರು ಕೂಡ ಇದೆ ಎಂದು ಹೇಳಲಾಗುತ್ತಿದೆ. ತಿರುಪತಿ ಪೂರ್ವ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸುಲು ಬಾಂಬ್ ಬೆದರಿಕೆಯ ಘಟನೆಯನ್ನು ದೃಢಪಡಿಸಿದ್ದಾರೆ ಮತ್ತು ಈ ಬೆದರಿಕೆಗಳಿಗೆ ಕಾರಣರಾದವರನ್ನು ಗುರುತಿಸಲಾಗುತ್ತಿದೆ 

# ರಿಲೀಸ್ ಡೇಟ್ ಅನೌನ್ಸ್ ಮಾಡಿದ ಪುಷ್ಪ 2 ಟೀಮ್

ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ ನಟನೆಯ 'ಪುಷ್ಪ 2' ಚಿತ್ರದ ಕುರಿತು ಫ್ಯಾನ್ಸ್ ಖುಷಿಪಡುವಂತಹ ಸಿಹಿಸುದ್ದಿ ಸಿಕ್ಕಿದೆ. ಚಿತ್ರದ ಮತ್ತೆ ರಿಲೀಸ್ ಡೇಟ್ ಬದಲಾಯಿಸಿ ಒಂದು ದಿನ ಮುಂಚಿತವಾಗಿಯೇ ಚಿತ್ರಮಂದಿರಕ್ಕೆ ಲಗ್ಗೆ ಇಡುತ್ತಿದೆ. ಆ.15ರಂದು 'ಪುಷ್ಪ 2' ಸಿನಿಮಾ ರಿಲೀಸ್ ಆಗಬೇಕಿತ್ತು. ಆದರೆ ಕಾರಣಾಂತರಗಳಿಂದ ಆಗಿರಲಿಲ್ಲ. ಆ ನಂತರ ಡಿ.6ರಂದು ಸಿನಿಮಾ ಬರೋದಾಗಿ ಚಿತ್ರತಂಡ ಅನೌನ್ಸ್ ಮಾಡಿತ್ತು. ಈ ಆ ಡೇಟ್‌ಗೂ ಸಿನಿಮಾ ರಿಲೀಸ್ ಆಗ್ತಿಲ್ಲ. ಬದಲಾಗಿ ಈ ವರ್ಷದ ಅಂತ್ಯ ಡಿಸೆಂಬರ್ 5ರಂದು ಸಿನಿಮಾ ಚಿತ್ರಮಂದಿರಗಳಲ್ಲಿ ಅಬ್ಬರಿಸಲಿದೆ. ಒಂದು ದಿನ ಮುಂಚಿತವಾಗಿ ಪುಷ್ಪರಾಜ್, ಶ್ರೀವಲ್ಲಿ ದರ್ಶನ ನೀಡಲಿದ್ದಾರೆ. ಈ ಕುರಿತು ಇಂದಿನ ಪ್ರೆಸ್ ಮೀಟ್‌ನಲ್ಲಿ ಚಿತ್ರತಂಡ ಅಧಿಕೃತ ಘೋಷಣೆ ಮಾಡಿದೆ. ಸಿನಿಮಾ ಮುಂದಕ್ಕೆ ಹಾಕದೆ ಒಂದು ದಿನ ಮುಂಚಿತವಾಗಿ 'ಪುಷ್ಪ 2' ಬರುತ್ತಿರುವ ಸುದ್ದಿ ಕೇಳಿಯೇ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

**ಫ್ಯಾನ್ಸ್‌ಗೆ ಸಿಹಿಸುದ್ದಿ**

## ವೆನಮ್: ದಿ ಲಾಸ್ಟ್ ಡ್ಯಾನ್ಸ್ ಚಿತ್ರದ ಅಬ್ಬರ

ಹಾಲಿವುಡ್ ಸಿನಿಮಾಗಳನ್ನು ನೋಡುವವರಿಗೆ ವೆನಮ್ ಫ್ರಾಂಚೈಸ್ ಬಗ್ಗೆ ಗೊತ್ತೇ ಇರುತ್ತದೆ. ಈ ಚಿತ್ರದ ಎರಡು ಭಾಗಗಳು ಈಗಾಗಲೇ ಸೂಪರ್ ಹಿಟ್ ಕಂಡಿವೆ. ಇದೀಗ 'ವೆನಮ್: ದಿ ಲಾಸ್ಟ್ ಡ್ಯಾನ್ಸ್' ಸಿನಿಮಾದ ಕೊನೆಯ ಫ್ರಾಂಚೈಸ್ ತೆರೆಗೆ ಬಂದಿದೆ. ಈ ಹಿಂದಿನ ಎರಡು ಚಿತ್ರಗಳ ಯಶಸ್ಸಿನ ನಂತರ, ಎಡ್ಡಿ ಬ್ರಾಕ್ ಮತ್ತು ವೆನಮ್ ಕಥೆಯು ಅಂತಿಮವಾಗಿ ಹೇಗೆ ಕೊನೆಗೊಳ್ಳುತ್ತದೆ ಎಂಬುದನ್ನು ನೋಡಲು ಪ್ರೇಕ್ಷಕರು ಉತ್ಸುಕರಾಗಿದ್ದರು. ಅದಕ್ಕೀಗ ಉತ್ತರ ಸಿಕ್ಕಿದೆ.

'ವೆನಮ್: ದಿ ಲಾಸ್ಟ್ ಡ್ಯಾನ್ಸ್' ಸಿನಿಮಾದ ಪ್ರೀಮಿಯರ್‌ನ ಭರಪೂರ ಮೆಚ್ಚುಗೆ ವ್ಯಕ್ತವಾಗಿತ್ತು. ಮುಂಗಡ ಟಿಕೆಟ್ ಬುಕ್ಕಿಂಗ್‌ನಲ್ಲಿಯೂ ದಾಖಲೆ ಬರೆದಿದ್ದ, ಈ ಚಿತ್ರವೀಗ ಬಿಗ್ ಸ್ಕ್ರೀನ್‌ಗೆ ಎಂಟ್ರಿ ಕೊಟ್ಟಿದೆ. ಪ್ರಬಲ ತಾರಾಗಣ, ಆಕರ್ಷಕ ಪಾತ್ರಗಳು ಮತ್ತು ರೋಮಾಂಚಕ ಕಥಾಹಂದರದೊಂದಿಗೆ, 'ವೆನಮ್: ದಿ ಲಾಸ್ಟ್ ಡ್ಯಾನ್ಸ್' ಸಿನಿಮಾ ಪ್ರೇಕ್ಷಕರನ್ನು ರಂಜಿಸಿದೆ.

ಈ ಚಿತ್ರದಲ್ಲಿ ಟಾಮ್ ಹಾರ್ಡಿ ವೆನಮ್ ಪಾತ್ರದಲ್ಲಿ ಜೀವಿಸಿದ್ದಾರೆ. ಚಿತ್ರದಲ್ಲಿ ಚಿವೆಟೆಲ್ ಎಜಿಯೋಫೋರ್, ಜುನೋ ಟೆಂಪಲ್, ರೈಸ್ ಇಫಾನ್ಸ್, ಪೆಗ್ಗಿ ಲು, ಅಲನ್ನಾ ಉಬಾಚ್ ಮತ್ತು ಸ್ಟೀಫನ್ ಗ್ರಹಾಂ ಮುಂತಾದವರು ಅಭಿನಯಿಸಿದ್ದಾರೆ. ಹಾರ್ಡಿ ಮತ್ತು ಮಾರ್ಸೆಲ್ ಅವರ ಕಥೆಯನ್ನು ಆಧರಿಸಿ ಕೆಲ್ಲಿ ಮಾರ್ಸೆಲ್ ಸಿನಿಮಾ ನಿರ್ದೇಶಿಸಿದ್ದಾರೆ. ಚಿತ್ರವನ್ನು ಅವಿ ಅರಾದ್, ಮ್ಯಾಟ್ ಟೋಲ್ಮಾಚ್, ಆಮಿ ಪಾಸ್ಕಲ್, ಕೆಲ್ಲಿ ಮಾರ್ಸೆಲ್, ಟಾಮ್ ಹಾರ್ಡಿ ಮತ್ತು ಹಚ್ ಪಾರ್ಕರ್ ನಿರ್ಮಿಸಿದ್ದಾರೆ.

# 14 ವರ್ಷದ ಬಳಿಕ ಚಿತ್ರರಂಗಕ್ಕೆ ಮರಳಲಿರುವ ರಂಭಾ

ಭಾರತ ಚಿತ್ರರಂಗದ ಕೆಲವು ಐಕಾನಿಕ್ ನಟಿಯರಲ್ಲಿ ರಂಭಾ ಸಹ ಒಬ್ಬರು. 90-2000 ದಶಕದಲ್ಲಿ ಹಲವು ಭಾಷೆಗಳಲ್ಲಿ ನಟಿಸಿ ಮೋಡಿ ಮಾಡಿದ್ದರು ರಂಭಾ. ತಮ್ಮ ಅತ್ಯುತ್ತಮ ಸೌಂದರ್ಯ ಹಾಗೂ ನಟನಾ ಪ್ರತಿಭೆಯಿಂದ ಹಲವು ಚಿತ್ರರಂಗಗಳ ಬೇಡಿಕೆಯ ನಟಿಯಾಗಿದ್ದರು. ಅತ್ಯಂತ ಕಡಿಮೆ ವಯಸ್ಸಿಗೆ ನಟಿಯಾದ ರಂಭಾ ಸುಮಾರು ಮೂರು ದಶಕಗಳ ಕಾಲ ಚಿತ್ರರಂಗದಲ್ಲಿ ಸ್ಟಾರ್ ಆಗಿ ಮೆರೆದರು. ಆದರೆ ಮದುವೆಯಾದ ಬಳಿಕ ನಟನೆಗೆ ವಿದಾಯ ಹೇಳಿದರು. ಆದರೆ ಈಗ ಹೊರಬಿದ್ದಿರುವ ಸುದ್ದಿಯಂತೆ ರಂಭಾ, ಪತಿಗೆ ವಿಚ್ಛೇದನ ನೀಡಲು ಮುಂದಾಗಿದ್ದು ಚಿತ್ರರಂಗಕ್ಕೆ ಸಹ ಮರಳಲಿದ್ದಾರಂತೆ. 2010 ರಲ್ಲಿ ನಟಿ ರಂಭಾ, ಶ್ರೀಲಂಕಾ ಮೂಲದ ಕೆನಡಾದಲ್ಲಿ ನೆಲೆಸಿರುವ ಉದ್ಯಮಿಯನ್ನು ವಿವಾಹವಾದರು. ರಂಭಾಗೆ ಮೂರು ಮಂದಿ ಮಕ್ಕಳು ಸಹ ಇದ್ದಾರೆ. ರಂಭಾ, ಪತಿಯೊಂದಿಗೆ ಟೊರಂಟೊದಲ್ಲಿ ನೆಲೆಸಿದ್ದಾರೆ. ಆದರೆ ಇತ್ತೀಚೆಗೆ ರಂಭಾ ದಾಂಪತ್ಯದಲ್ಲಿ ವಿರಸ ಮೂಡಿದ್ದು ರಂಭಾ, ತಮ್ಮ ಪತಿಗೆ ವಿಚ್ಛೇದನ ನೀಡಿ ಭಾರತಕ್ಕೆ ಮರಳಲಿದ್ದಾರೆ ಎನ್ನಲಾಗುತ್ತಿದೆ. ಮಾತ್ರವಲ್ಲದೆ ರಂಭಾ ಮತ್ತೆ ಸಿನಿಮಾ ನಟನೆ ಆರಂಭಿಸಲಾಗಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ಈ ಬಗ್ಗೆ ಮಾಧ್ಯಮವೊಂದಕ್ಕೆ ಮಾತನಾಡಿದ್ದ ರಂಭಾ, 'ದಾಂಪತ್ಯದಲ್ಲಿ ವಿರಸ ಇತ್ತು, ಅದು ಸಣ್ಣ ಭಿನ್ನಾಭಿಪ್ರಾಯ ಮಾತ್ರ, ಅದು ಎಲ್ಲಾ ಕುಟುಂಬಗಳಲ್ಲಿಯೂ ಇರುವಂಥಹದ್ದೇ.

**ಪತಿಗೆ ವಿಚ್ಛೇದನ ಕೊಟ್ಟು ಕಲಾಸೇವೆಗೆ ಹೆಜ್ಜೆ**

# ಸೈನಿಕರ ಬಗ್ಗೆ ಸಾಯಿ ಪಲ್ಲವಿ ಮಾತು

ದ್ವೇಷ ಮಾಡುವವರೇ ಇಲ್ಲದ ನಟಿ ಸಾಯಿ ಪಲ್ಲವಿ. ನಟಿಯನ್ನು ಇಷ್ಟಪಡದ ಸಿನಿಮಾ ಪ್ರೇಮಿ ಇಲ್ಲ ಎನ್ನಬಹುದು. ಲೇಡಿ ಸೂಪರ್ ಸ್ಟಾರ್ ಆಗುವ ಎಲ್ಲಾ ಲಕ್ಷಣಗಳು ಇರುವ ನಟಿ. ಸಿನಿಮಾ ಪ್ರೇಮಿಗಳು ಮಾತ್ರವಲ್ಲ, ಹಲವು ಸಿನಿಮಾ ನಟ-ನಟಿಯರೇ ಸಾಯಿ ಪಲ್ಲವಿ ನಟನೆಯ, ಅಂದದ ಎಲ್ಲಾದಕ್ಕಿಂತಲೂ ಹೆಚ್ಚಾಗಿ ಸಾಯಿ ಪಲ್ಲವಿಯ ವ್ಯಕ್ತಿತ್ವದ ಅಭಿಮಾನಿಗಳು. ಯಾವುದೇ ವಿವಾದದಲ್ಲೂ ಸಾಯಿ ಪಲ್ಲವಿ ಸಿಲುಕಿಕೊಳ್ಳುವುದಿಲ್ಲ. ಆದರೆ ಈಗ ಕೆಲವರು ಸಾಯಿ ಪಲ್ಲವಿಯ ಹಳೆಯ ವಿಡಿಯೋ ಹಂಚಿಕೊಂಡು ನಟಿಯನ್ನು ಟ್ರೋಲ್ ಮಾಡಲು ಯತ್ನಿಸುತ್ತಿದ್ದಾರೆ.

ಸಾಯಿ ಪಲ್ಲವಿ ನಟಿಸಿರುವ 'ಅಮರನ್' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾದಲ್ಲಿ ಸಾಯಿ ಪಲ್ಲವಿ, ಹುತಾತ್ಮ ಯೋಧ ಮೇಜರ್ ಮುಕುಂದನ್ ಪತ್ನಿ ರೆಬೆಕಾ ವರ್ಗೀಸ್ ಅವರ ಪಾತ್ರದಲ್ಲಿ ನಟಿಸಿದ್ದಾರೆ. ಮೇಜರ್ ಮುಕುಂದನ್ ಕಾಶ್ಮೀರದಲ್ಲಿ ಭಯೋತ್ಪಾದಕರೊಂದಿಗೆ ಸೆಣಸುವಾಗ ಹುತಾತ್ಮರಾದರು. ಮೇಜರ್ ಮುಕುಂದನ್ ಪಾತ್ರದಲ್ಲಿ ಶಿವಕಾರ್ತಿಕೇಯನ್ ನಟಿಸುತ್ತಿದ್ದಾರೆ. ಈಗ ಸಾಯಿ ಪಲ್ಲವಿ ಸಿನಿಮಾ ಬಿಡುಗಡೆ ಆಗುತ್ತಿರುವ ಸಂದರ್ಭದಲ್ಲಿ ಕೆಲವರು ಸಾಯಿ ಪಲ್ಲವಿಯ ಹಳೆಯ ವಿಡಿಯೋ ಇರಿಸಿಕೊಂಡು ಟ್ರೋಲ್ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಸಾಯಿ ಪಲ್ಲವಿ, 'ವಿರಾಟ ಪರ್ವಂ' ಹೆಸರಿನ ಸಿನಿಮಾ ಮಾಡಿದ್ದರು. ಸಿನಿಮಾದಲ್ಲಿ ಸಾಯಿ ಪಲ್ಲವಿಯದ್ದು ನಕ್ಸಲ್ ಒಬ್ಬನನ್ನು ಪ್ರೀತಿಸುವ ಹಾಗೂ ಸ್ವತಃ ತಾನೂ ನಕ್ಸಲ್ ಆಗುವ ಪಾತ್ರ. ಸಿನಿಮಾದ ಪ್ರಚಾರದ ಸಂದರ್ಭದಲ್ಲಿ ನಕ್ಸಲ್ ರ ಹಿಂಸಾಚಾರದ ಬಗ್ಗೆ ಸಾಯಿ ಪಲ್ಲವಿಗೆ ಪ್ರಶ್ನೆ ಮಾಡಲಾಗಿತ್ತು. ಪ್ರಶ್ನೆಗೆ ಸುದೀರ್ಘ ಉತ್ತರ ನೀಡಿದ್ದ ಸಾಯಿ ಪಲ್ಲವಿ, ಹಿಂಸಾಚಾರ ಎಂಬುದು ನನಗೆ ಅರ್ಥ ಆಗುವುದಿಲ್ಲ. ಪಾಕಿಸ್ತಾನದವರಿಗೆ ನಾವು (ಭಾರತೀಯರು) ನಮ್ಮ ಸೈನಿಕರನ್ನು ಕಂಡರೆ ಅಪಾಯ, ಭಯೋತ್ಪಾದಕರು ಎನಿಸುತ್ತದೆ. ನಮಗೆ ಅವರನ್ನು ನೋಡಿದರೆ ಭಯೋತ್ಪಾದಕರು ಎನಿಸುತ್ತಾರೆ' ಎಂದಿದ್ದರು. ಈ ವಿಡಿಯೋ ಕ್ಲಿಪ್ ಇಟ್ಟುಕೊಂಡು ಭಾರತೀಯ ಸೈನಿಕರನ್ನು ಸಾಯಿ ಪಲ್ಲವಿ ಭಯೋತ್ಪಾದರು ಎಂದಿದ್ದಾರೆ ಎಂಬ ಒಕ್ಕಣೆಯೊಂದಿಗೆ ವೈರಲ್ ಮಾಡುವ ಪ್ರಯತ್ನ ಮಾಡಲಾಗುತ್ತಿದೆ.

# ರಶ್ಮಿಕಾ ಸಿನಿಮಾದಲ್ಲಿ ನವಾಜುದ್ದೀನ್ ಸಿದ್ಧಿಕಿ ವಿಲನ್



'ಅನಿಮಲ್' ಸಿನಿಮಾದ ಸಕ್ಸಸ್ ಬಳಿಕ ರಶ್ಮಿಕಾ ಮಂದಣ್ಣಗೆ ಬಾಲಿವುಡ್‌ನಲ್ಲಿ ಬೇಡಿಕೆ ಹೆಚ್ಚಾಗಿದೆ. ಆಯುಷ್ಮಾನ್ ಖುರಾನಾ ಮತ್ತು ರಶ್ಮಿಕಾ ಜೋಡಿಯಾಗಿ ನಟಿಸುತ್ತಿರುವ ಹೊಸ ಚಿತ್ರಕ್ಕೆ ನವಾಜುದ್ದೀನ್ ಸಿದ್ಧಿಕಿ ವಿಲನ್ ಆಗಿ ಅಬ್ಬರಿಸಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ.

ಮೊದಲ ಬಾರಿಗೆ ಆಯುಷ್ಮಾನ್ ಮತ್ತು ರಶ್ಮಿಕಾ ಜೊತೆಯಾಗಿ ನಟಿಸುತ್ತಿದ್ದಾರೆ. 14ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಬಗ್ಗೆ ಚಿತ್ರದ ಕಥೆ ಒಳಗೊಂಡಿದೆ. ಈ ಚಿತ್ರಕ್ಕೆ ಸದ್ಯ ತಂಬಾ ಎಂದು ಟೈಟಲ್ ಇಡಲಾಗಿದ್ದು, ಸಿನಿಮಾದಲ್ಲಿ ಆಯುಷ್ಮಾನ್ ಮತ್ತು ರಶ್ಮಿಕಾಗೆ ನವಾಜುದ್ದೀನ್ ಸಿದ್ಧಿಕಿ ಅವರು ವಿಲನ್ ಆಗಿ ಅಬ್ಬರಿಸಲಿದ್ದಾರೆ ಎನ್ನಲಾಗಿದೆ. ಈಗಾಗಲೇ ಬದ್ಲಾಪುರ, ಕಿಕ್ ಸಿನಿಮಾಗಳಲ್ಲಿ ವಿಲನ್ ಆಗಿ ನಟಿಸಿ ಸೈ ಎನಿಸಿಕೊಂಡಿರುವ ನವಾಜುದ್ದೀನ್ ಈ ಚಿತ್ರದಲ್ಲೂ ಖಳನಟನಾಗಿ ನಟಿಸಿದ್ರೆ ಸೂಕ್ತ ಎಂದು ಚಿತ್ರತಂಡ ನಿರ್ಧರಿಸಿದೆ ಎನ್ನಲಾಗಿದೆ. ನಟನ ಜೊತೆ ಕೂಡ ಒಂದು ಮಾತುಕತೆ ಕೂಡ ಮಾಡಿದೆಯಂತೆ.

ಇದು ಅದೆಷ್ಟರ ಮಟ್ಟಿಗೆ ನಿಜ ಎಂಬುದನ್ನು ಚಿತ್ರತಂಡ ಅಧಿಕೃತವಾಗಿ ಅನೌನ್ಸ್ ಮಾಡುವವರೆಗೂ ಕಾದು ನೋಡಬೇಕಿದೆ.

ಇನ್ನೂ 'ತಂಬಾ' ಚಿತ್ರದ ಶೂಟಿಂಗ್ ಈ ವರ್ಷದ ಅಂತ್ಯದಲ್ಲಿ ಶುರುವಾಗಲಿದೆ. ಮುಂಬೈ ಮಾತ್ರವಲ್ಲ, ಕರ್ನಾಟಕದ ಹಂಪಿಯಲ್ಲೂ ಶೂಟಿಂಗ್ ಮಾಡುವ ಪ್ಲ್ಯಾನ್ ಚಿತ್ರತಂಡಕ್ಕಿದೆ. ಇನ್ನೂ ರಶ್ಮಿಕಾ ಸದ್ಯ ನಟಿಸಿರುವ 'ಪುಷ್ಪ 2' ಮತ್ತು 'ಛಾವಾ' ಎರಡು ಚಿತ್ರಗಳು ಡಿಸೆಂಬರ್‌ನಲ್ಲಿ ರಿಲೀಸ್ ಆಗುತ್ತಿದೆ. ಶ್ರೀವಲ್ಲಿ ನಟನೆ ನೋಡೋಕೆ ಫ್ಯಾನ್ಸ್ ಕಾಯುತ್ತಿದ್ದಾರೆ.

# ಸರಣಿ ಕೈತಪ್ಪುವ ಭೀತಿಯಲ್ಲಿ ಟೀಂ ಇಂಡಿಯಾ; ಬೃಹತ್ ಮೊತ್ತದತ್ತ ಕಿವೀಸ್

## ನ್ಯೂಜಿಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಐದು ವಿಕೆಟ್ ಕಳೆದುಕೊಂಡು 198 ರನ್ ಗಳಿಸಿದ್ದು, ಬೃಹತ್ ಮೊತ್ತದತ್ತ ದಾಪುಗಾಲು

**300 ರ ಗಡಿ ದಾಟಿದ ಕಿವೀಸ್**

ಭಾರತ ಹಾಗೂ ನ್ಯೂಜಿಲೆಂಡ್ ನಡುವೆ ಪುಣೆಯಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟ ಮುಕ್ತಾಯಗೊಂಡಿದೆ. ನ್ಯೂಜಿಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಐದು ವಿಕೆಟ್ ಕಳೆದುಕೊಂಡು 198 ರನ್ ಗಳಿಸಿದ್ದು, ಬೃಹತ್ ಮೊತ್ತದತ್ತ ದಾಪುಗಾಲಿಟ್ಟಿದೆ. ಕಿವೀಸ್ ತಂಡ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 259 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಟೀಂ ಇಂಡಿಯಾ ಕೇವಲ 156 ರನ್‌ಗಳಿಗೆ ಆಲೌಟ್ ಆಗಿತ್ತು. ಈ ಮೂಲಕ ಎರಡನೇ ಇನಿಂಗ್ಸ್‌ನಲ್ಲಿ ನ್ಯೂಜಿಲೆಂಡ್ ತಂಡದ ಒಟ್ಟು ಮುನ್ನಡೆ 300 ರನ್ ದಾಟಿದೆ. ಇನ್ನೂ ಈ ಟೆಸ್ಟ್‌ನಲ್ಲಿ ಮೂರು ದಿನಗಳ ಆಟ ಬಾಕಿ ಇದ್ದು ಈ ಪಂದ್ಯದ ಫಲಿತಾಂಶ ಹೊರಬೀಳುವುದು ಖಚಿತವಾಗಿದೆ. ಚೆಂಡು ಸ್ಪಿನ್ ಆಗುತ್ತಿರುವ ರೀತಿ ನೋಡಿದರೆ ನಾಲ್ಕನೇ ಇನ್ನಿಂಗ್ಸ್‌ನಲ್ಲಿ 300ಕ್ಕಿಂತ ಹೆಚ್ಚಿನ ಗುರಿ ಬೆನ್ನಟ್ಟುವುದು ಟೀಂ ಇಂಡಿಯಾಕ್ಕೆ ಸುಲಭವಲ್ಲದ ಸಂಗತಿಯಾಗಿಲ್ಲ.

**300 ರ ಗಡಿ ದಾಟಿದ ಕಿವೀಸ್**

ಇನ್ನು ಎರಡನೇ ಇನ್ನಿಂಗ್ಸ್‌ನಲ್ಲಿ ಕಿವೀಸ್ ತಂಡದ ಪರ ನಾಯಕ ಟಾಮ್ ಲೇಥಮ್ 133 ಎಸೆತಗಳಲ್ಲಿ 10 ಬೌಂಡರಿಗಳ ಸಹಿತ 86 ರನ್ ಗಳಿಸಿ ಔಟಾದರೆ, ವಿಕೆಟ್‌ಕೀಪರ್ ಟಾಮ್ ಬ್ಲಂಡೆಲ್ 30 ರನ್ ಬಾರಿಸಿ ಅಜೇಯರಾಗಿ ಉಳಿದಿದ್ದು, ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಈ ಇಬ್ಬರ ಹೊರತಾಗಿ ಡೆವೊನ್ ಕಾನ್ವೆ 17 ರನ್, ವಿಲ್ ಯಂಗ್ 23, ರಚಿನ್ ರವೀಂದ್ರ 9 ಮತ್ತು ಡೇರಿಲ್ ಮಿಚೆಲ್ 18 ರನ್‌ಗಳ ಕಾಣಿಕೆ ನೀಡಿದ್ದಾರೆ. ಇನ್ನು ಟೀಂ ಇಂಡಿಯಾ ಪರ ಮೊದಲ ಇನ್ನಿಂಗ್ಸ್‌ನಲ್ಲಿ 7 ವಿಕೆಟ್ ಪಡೆದು ಮಿಂಚಿದ್ದ ವಾಷಿಂಗ್ಟನ್ ಸುಂದರ್, ಎರಡನೇ ಇನ್ನಿಂಗ್ಸ್‌ನಲ್ಲೂ ಕಮಾಲ್ ಮಾಡಿದ್ದು, ಇದುವರೆಗೆ 4 ವಿಕೆಟ್ ಉರುಳಿಸಿದ್ದಾರೆ ಉಳಿದಂತೆ ರವಿಚಂದ್ರನ್ ಅಶ್ವಿನ್ 1 ವಿಕೆಟ್ ಪಡೆದಿದ್ದಾರೆ.

**ಕುಸಿದ ಭಾರತದ ಇನ್ನಿಂಗ್ಸ್**

**ಹಾಗೆಯೇ ಭಾರತದ ಮೊದಲ ಇನ್ನಿಂಗ್ಸ್ ಬಗ್ಗೆ ಹೇಳುವುದಾದರೆ.. ಮೊದಲ ದಿನದಾಟದಂತ್ಯಕ್ಕೆ ಒಂದು ವಿಕೆಟ್ ಕಳೆದುಕೊಂಡು 16 ರನ್ ಬಾರಿಸಿದ್ದ ಟೀಂ ಇಂಡಿಯಾ ಇಲ್ಲಿಂದ ತನ್ನ ಇನ್ನಿಂಗ್ಸ್ ಮುಂದುವರೆಸಿದ್ದು, 140 ರನ್ ಗಳಿಸುವಷ್ಟರಲ್ಲಿ ಉಳಿದ 9 ವಿಕೆಟ್ ಗಳನ್ನು ಕಳೆದುಕೊಂಡಿತು. ಎರಡನೇ ದಿನದಾಟದ ಆರಂಭದಲ್ಲಿ 30 ರನ್ ಕಲೆಹಾಕಿದ್ದ ಗಿಲ್, ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರೆ, ಆ ನಂತರ ಬಂದ ವಿರಾಟ್ ಕೊಹ್ಲಿ ಕೂಡ ವಿಶೇಷ ಏನನ್ನೂ ಮಾಡಲಾಗದೆ ಒಂದು ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಉಳಿದಂತೆ ರಿಷಬ್ ಪಂತ್ 18 ರನ್, ಸರ್ಫರಾಜ್ ಖಾನ್ 11 ರನ್, ಆರ್ ಅಶ್ವಿನ್ 4 ರನ್, ಆಕಾಶ್ ದೀಪ್ 6 ರನ್ ಕಲೆಹಾಕಿದರೆ, ಬುಮ್ರಾ ಖಾತೆ ತೆರೆಯದೆ ಔಟಾದರು. ತಂಡದ ಪರ ರವೀಂದ್ರ ಜಡೇಜಾ ಗರಿಷ್ಠ 38 ರನ್ ಬಾರಿಸಿದರೆ, ವಾಷಿಂಗ್ಟನ್ ಸುಂದರ್ 18 ರನ್ ಗಳಿಸಿ ಅಜೇಯರಾಗಿ ಉಳಿದರು.**

# ವರ್ಷದಲ್ಲಿ ಸಾವಿರ ರನ್; ಇತಿಹಾಸ ಬರೆದ ಯಶಸ್ವಿ ಜೈಸ್ವಾಲ್

ಪುಣೆಯಲ್ಲಿ ನಡೆಯುತ್ತಿರುವ ನ್ಯೂಜಿಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಟೀಂ ಇಂಡಿಯಾದ ಆರಂಭಿಕ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ 30 ರನ್‌ಗಳ ಇನ್ನಿಂಗ್ಸ್ ಆಡಿದರು. ಜೈಸ್ವಾಲ್‌ಗೆ ಉತ್ತಮ ಆರಂಭ ಸಿಕ್ಕ ಹೊರತಾಗಿಯೂ ಅದನ್ನು ಬಿಗ್ ಇನ್ನಿಂಗ್ಸ್ ಆಗಿ ಪರಿವರ್ತಿಸುವಲ್ಲಿ ವಿಫಲರಾದರು. ಆದಾಗ್ಯೂ ಜೈಸ್ವಾಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ದಾಖಲೆಯೊಂದನ್ನು ನಿರ್ಮಿಸಿದ್ದಾರೆ.

ಪುಣೆ ಟೆಸ್ಟ್‌ನ ಎರಡನೇ ದಿನದಂದು 30 ರನ್‌ಗಳ ಇನ್ನಿಂಗ್ಸ್ ಆಡಿದ ಜೈಸ್ವಾಲ್, ಈ ಮೂಲಕ 2024ರಲ್ಲಿ ಟೆಸ್ಟ್‌ನಲ್ಲಿ 1000 ರನ್ ಪೂರೈಸಿದ ವಿಶ್ವದ ಎರಡನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಯಶಸ್ವಿ ಜೈಸ್ವಾಲ್ 2024 ರಲ್ಲಿ ಇದುವರೆಗೆ ಆಡಿರುವ 10 ಟೆಸ್ಟ್ ಗಳಲ್ಲಿ 59.23 ಸರಾಸರಿ ಮತ್ತು 76 ಸ್ಟ್ರೈಕ್ ರೇಟ್‌ನಲ್ಲಿ 1007 ರನ್ ಗಳಿಸಿದ್ದಾರೆ.

ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಇಂಗ್ಲೆಂಡ್‌ನ ಜೋ ರೂಟ್ 14 ಟೆಸ್ಟ್‌ಗಳಲ್ಲಿ 60 ಸರಾಸರಿಯಲ್ಲಿ 1305 ರನ್ ಗಳಿಸಿದ್ದಾರೆ. ಈ ವರ್ಷ ರೂಟ್, 5 ಶತಕ ಮತ್ತು 4 ಅರ್ಧ ಶತಕಗಳನ್ನು ಸಿಡಿಸಿದ್ದಾರೆ. ಈ ವರ್ಷ ಮುಲ್ತಾನ್‌ನಲ್ಲಿ ಪಾಕಿಸ್ತಾನ ವಿರುದ್ಧ ಆಡಿದ ಟೆಸ್ಟ್‌ನಲ್ಲಿ ರೂಟ್ ಗರಿಷ್ಠ 262 ರನ್‌ಗಳ ಇನ್ನಿಂಗ್ಸ್ ಕೂಡ ಆಡಿದ್ದರು.

ಇನ್ನು ಜೈಸ್ವಾಲ್ ಈ ವರ್ಷದ ಆರಂಭದಲ್ಲಿ ರಾಜ್‌ಕೋಟ್ ಟೆಸ್ಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ 214 ರನ್ ಬಾರಿಸಿದ್ದರು. ಇದಕ್ಕೂ ಮುನ್ನ ವೈಜಾಗ್ ಟೆಸ್ಟ್‌ನಲ್ಲಿ 209 ರನ್‌ಗಳ ಇನ್ನಿಂಗ್ಸ್ ಕೂಡ ಆಡಿದ್ದರು. ಕಳೆದ ವರ್ಷ, ವೆಸ್ಟ್ ಇಂಡೀಸ್ ವಿರುದ್ಧದ ಚೊಚ್ಚಲ ಟೆಸ್ಟ್ ಪಂದ್ಯದಲ್ಲಿ ಜೈಸ್ವಾಲ್ 171 ರನ್‌ಗಳ ಸ್ಮರಣೀಯ ಇನ್ನಿಂಗ್ಸ್ ಆಡಿದ್ದರು.

ಇನ್ನು ಎರಡನೇ ಟೆಸ್ಟ್‌ನಲ್ಲೂ ಉತ್ತಮ ಆರಂಭ ಪಡೆದ ಜೈಸ್ವಾಲ್ 60 ಎಸ